Registered No. M. 1393

ಕಂಠೀರವ

KANTEERAVA

KANARESE, BI-WEEKLY

ESTD. 1919 ಸ್ಥಾಪನೆ

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

ಸಂಪುಟ ೨೩ | ಮಂಗಳೂರು, ೧೯೪೨ನೇ ಇಸವಿ ಮಾರ್ಚಿ ತಾರೀಕು ೧೭ನೇ ಮಂಗಳವಾರ | ಸಂಚಿಕೆ
VOL. XXIII | MANGALORE, TUESDAY, MARCH 17, 1942 | NO.

ಸರಬರಾಯಿ ಶಾಖೆಯ ಕೆಲಸ ಕಾರ್ಯ

ಕೇಂದ್ರ ಎಸೆಂಬ್ಲಿಯಲ್ಲಿ ಸದಸ್ಯರ ಟೀಕೆ

ಸರಬರಾಯಿ ಶಾಖಾ ಕಾರ್ಯದರ್ಶಿಗಳ ಹೇಳಿಕೆ

ಸರ್ ಜಿಯಾದ್ದೀನ್ ಅಹಮದ್ ರವರು ಸರಬರಾಯಿ ಶಾಖೆಯ ಕೊಳ್ಳುವ ಹಾಗೂ ಪರೀಕ್ಷಿಸುವ ಕಾರ್ಯನೀತಿಯ ಕುರಿತು; ಕೇಂದ್ರ ಎಸೆಂಬ್ಲಿಯಲ್ಲಿ ಪ್ರಸ್ತಾಎಸಿ, ಈ ಯುದ್ಧವು ಕನಿಷ್ಟಪಕ್ಷ ಇನ್ನು ಮೂರು ವರ್ಷಗಳ ವರೆಗಾದರೂ ನಡೆಯಬಹುದೆಂದೂ, ಆಗ ಭಾರತವು ತನ್ನ ಸರಬರಾಯಿಗಾಗಿ ಹೆಚ್ಚಿನ ಮಟ್ಟಿಗೆ ತನ್ನ ಮೇಲೇ ಆಧರಿಸಿ ಕೊಳ್ಳಬೇಕಾಗಿದೆ ಎಂದೂ ಸಾರಿದರು. ಆದ್ದರಿಂದ ಇಂಡಿಯದ ಯಾವತ್ತು ಸಾಮಗ್ರಿಗಳನ್ನೂ ಶೇಖರಿಸಿ ಅವನ್ನು ಮಿತವಾಗಿ ವ್ಯಯಮಾಡಿರೆಂದರು. ಈ ಶಾಖೆಯಲ್ಲಿ ಅಶುದ್ಧ ಆಚರಣೆಗಳಿವೆ ಎಂಬುದನ್ನು ಅವರು ದೃಷ್ಟಾಂತ ಸಹಿತವಾಗಿ ವಿಮರ್ಶಿಸುತ್ತ ಗುಡಿಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದೂ, ಈ ಶಾಖೆಯ ಎಡ್ವೈಜರರಾಗಿ, ಉದ್ಯೋಗಿಗಳಾಗಿ ವ್ಯಾಪಾರೀ ವರ್ಗದವರನ್ನು ನೇಮಿಸಬಾರದೆಂದೂ, ಅಂಥ ಉದ್ಯೋಗಿಗಳು ತಮ್ಮ ಘರ್ಮುಗಳಿಂದ ಸಂಭಾವನೆ ಪಡೆಯುತ್ತಿರುವರೆಂದೂ, ಈ ಶಾಖೆಯ ಇನಸ್ಪೆಕ್ಷನ್ ಪದ್ಧತಿ ಚೆನ್ನಾಗಿಲ್ಲವೆಂದೂ ಟೀಕಿಸಿದರು. ಸೇನೆಯ ಮುಂದಿ ಸೈನ್ಯದ ಶಿಕ್ಷಣಕ್ಕಾಗಿ, ಯುದ್ಧರಂಗಗಳಿಗಾಗಿ ಬೇರೆ ಕಡೆ ಜರೂರು ಬೇಕಾಗಿರುವಾಗ, ಅಂಥವರನ್ನು ಈ ಶಾಖೆಯಲ್ಲಿನ ನಾನಾ ಉದ್ಯೋಗಗಳಿಗಾಗಿ ನೇಮಿಸಿರುವುದೇಕೆ ಎಂದು ಕೇಳಿದರು. ಈ ಶಾಖೆಯ ಇನ್ಸ್ಪೆಕ್ಟರುಗಳಾಗಿ ದಿನವಿಡೀ ಕೆಲಸ ಮಾಡುವ ಅಧಿಕಾರಿಗಳನ್ನೇ ನೇಮಿಸಿ; ಕಂಟ್ರಾಕ್ಟರುಗಳ ದೂರು ಕೇಳಲು, ವಿಚಾರಿಸಲು ಒಂದು ಸಿಬಂದಿಯನ್ನೇರ್ಪಡಿಸಿ; ಆ ಸಿಬಂದಿಯಲ್ಲಿ ಕಂಟ್ರಾಕ್ಟರುಗಳ ಪ್ರತಿನಿಧಿಗಳೂ, ಎಸೆಂಬ್ಲಿ ಮೆಂಬರುಗಳೂ ಇರಲಿ ಎಂದರು.

ಶ್ರೀ. ಜಮುನಾದಾಸ್ ಮೇಥರ ರವರು ಮೇಲಿನ ಆರೋಪಗಳನ್ನು ಸಮರ್ಥಿಸುತ್ತ, "ಈ ಶಾಖೆಯಲ್ಲಿ ಸುಂಕದ ತೆರಿಗೆಯ ನಾಲ್ಕು ಗೇಟುಗಳಿವೆ; ಆಲ್ಲಿ ಕಂಟ್ರಾಕ್ಟರು ತೆರಬೇಕಾಗಿದೆ; ಒಬ್ಬ ಕಂಟ್ರಾಕ್ಟರು, ತನ್ನ ಹೆಸರನ್ನು "ಯೋಗ್ಯ" ಕಂಟ್ರಾಕ್ಟರು ಎಂದು ರಿಜಿಸ್ಟರ್ ಮಾಡಿಸಿಕೊಳ್ಳುವಾಗಲೂ, ಕಂಟ್ರಾಕ್ಟನ್ನು ಪಡೆಯುವಾಗಲೂ, ತನ್ನ "ಸಾಮಗ್ರಿಗಳು ಒಳ್ಳೆಯವೆ"ಂದು ಒಪ್ಪಿಗೆ ಪಡೆಯುವಾಗಲೂ, ತನಗೆ ಬರ ತಕ್ಕ ಹಣ ದೊರಕುವಾಗಲೂ ಅವನು ದಕ್ಷಿಣೆ ಪ್ರದಕ್ಷಿಣೆಗಳನ್ನು ಸಲ್ಲಿಸಬೇಕಾಗಿದೆ. ಅಷ್ಟೇ ಅಲ್ಲದೆ, ಹಸ್ತಶುದ್ಧಿ ಅಥವಾ ಕೈ ಬಿಚ್ಚಿಗೆ ಮಾಡಿದರೆ, ಅವನು ತನ್ನ ಪೂರಾ ಸಾಮಗ್ರಿಗಳನ್ನು ಸರಬರಾಯಿ ಮಾಡದೆಯೇ ಹಾಗೆ ಮಾಡಿರುವನೆಂದೇ ಸರ್ಟಿಫಿಕೇಟ್ ಪಡೆಯಲೂ ಸಾಧ್ಯವಿದೆ" ಎಂದರು.

ಸರಬರಾಯಿ ಶಾಖೆಯ ಕಾರ್ಯದರ್ಶಿ ಮಿ| ಇ. ಎಂ. ಜೆಂಕಿನ್ಸ್ ಉತ್ತರ ಕೊಡುತ್ತ—"ಸರಕಾರ ಗುಡಿಕೈಗಾರಿಕೆಗಳನ್ನು ಅಸಡ್ಡೆ ಮಾಡಿಲ್ಲ. ೨೦ ಲಕ್ಷ ಬ್ಲಾಂಕೆಟ್, ಹುರಿಚ್ಛಾಪೆ ಮತ್ತು ಕಟ್ಟಿಲರಿಗಳನ್ನು ನಾವು ಕೊಂಡುಕೊಂಡಿದ್ದೇವೆ. ಸದ್ಯದಲ್ಲೇ ಜರುಗಲಿ[illegible] ಕಾನ್ಫರೆನ್ಸ್‌ನಲ್ಲಿ ಗುಡಿಕೈಗಾರಿಕೆಗಳಿಗೂ ಇನ್ನೂ ಹೆಚ್ಚಾಗಿ ಉಪಯೋಗಿಸಿಕೊಳ್ಳುವ ಯೋಜನೆಯ ಕುರಿತಾಗಿ ನಡೆಯಲಿದೆ. ಪ್ರತಿ ಪ್ರಾಂತ್ಯದ ಸಹಕಾರ ಪದ್ಧತಿಯ ಮೇರೆಗೆ ಸಿಬಂದಿಯನ್ನೇರ್ಪಡಿಸಿ ಅದು ಗುಡಿಕೈಗಾರಿಕೆಗಳ ಸುಪರಿಂಟೆಂಡೆಂಟರ

(೫ನೇ ಪುಟಕ್ಕೆ ಮುಂದುವರಿಸಿಯದೆ)

ಸ್ಕಾಟ್‌ಲೆಂಡಿನ ಜಲಧಿಯಲ್ಲಿ ಬ್ರಿಟಿಷ್ ಸೇನೆಗಳು

ಪ್ರತ್ಯೇಕವಾಗಿ ರಚಿಸಿದ ಆಕ್ರಮಣದ ದೋಣಿಗಳಿಂದ ಇಳಿದು ನುಗ್ಗುವ ಒಂದು ಪ್ರದರ್ಶನವನ್ನು ಬ್ರಿಟಿಷ್ ಸೇನೆಗಳು ಏರ್ಪಡಿಸಿದ್ದ ಚಿತ್ರವಿದು. ಘನವನ್ನೈದಿದ ನಮ್ಮ ಚಕ್ರವರ್ತಿಗಳಾದ ಆರನೇ ಜಾರ್ಜ್ ಮಹಾಪ್ರಭುಗಳು ಇದನ್ನು ಈಕ್ಷಿಸುತ್ತಿದ್ದಾರೆ.

ಊಟವಾದ ಮೇಲಣ ಸು

ಅಜೀರ್ಣ, ಪಿತ್ಥ ಸಂಕಟ, ಹುಳಿ ವಾಯು ತುಂಬುವಿಕೆ—ಇವೆಲ್ಲವೂ ನಿಮ್ಮಯಲ್ಲಿನ ಅಧಿಕ ಆಮ್ಲರಸವು ಆಹಾಫುಟ್ಟಿಯಾಗಿಯೂ ಚರ್ಮದಂತೆಯೂ ಎಂದರಿಂದ ಅದು ಸರಿಯಾಗಿ ಜೀರ್ಣವಾಗದುದರಿಂದಾಗಿ ಸಂಭವಿಸುತ್ತವೆ.

ಅದೃಷ್ಟವಶಾತ್ ಯಾರೊಬ್ಬರೂ ಅಧಿಕವಾದ ಹೊಟ್ಟೆಯಲ್ಲಿನ ಆಮ್ಲರಸದ ಬಾಧೆಯನ್ನಾಗಲಿ ಅದರ ಸೋವನ್ನಾಗಲಿ ಅಸೌಖ್ಯವನ್ನಾಗಲಿ ಅನುಭವಿಸುತ್ತಿರಬೇಕೆಂದಿಲ್ಲ. ಉಪದ್ರವದ ಪ್ರಥಮ ಚಿಹ್ನೆ ತೋರಿದೊಡನೆ, ಎರಡು ಚಾಚಂಚ ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾ ಯಾ ಎರಡು ಫಿಲ್ಲಿಪ್ಸ್ ಬಿಲ್ಲೆ ಸೇವಿಸಿದರೆ ಅದು ಶೀಘ್ರವಾಗಿ ಅಧಿಕವಾದ ಆಮ್ಲರಸವನ್ನು ಕ್ರಮಗೊಳಿಸುವುದು. ಫಿಲ್ಲಿಪ್ಸ್ ನಿಮ್ಮ ಹೊಟ್ಟೆಯನ್ನು ಪುನಃ ಯಥಾಸ್ಥಿತಿಗೆ ತರುವದರೊಡನೆ ಆಹಾರವು ಸಂಪೂರ್ಣವಾಗಿ ಜೀರ್ಣವಾಗುವುದಲ್ಲದೆ ಸೋವು ಯಾ ಅಸೌಖ್ಯದ ಕುರುಹೇ ಉಳಿಯುವದಿಲ್ಲ.

ಫಿಲ್ಲಿಪ್ಸ್ ಪರಿಣಾಮಕಾರಿಯಾದ ಭೇದಿಯೂ ಆಗಿರುತ್ತದೆ. ವೇಗತೆಯಿಂದ ಆದರೂ ಸಮಾಧಾನಕರವಾಗಿ ಅದು ನಿಮ್ಮ ಪ್ರಕೃತಿಯನ್ನು ವಿಷಭರಿತ ಕಶ್ಮಲ ಪದಾರ್ಥಗಳಿಂದ ಬಾಹಿರವನ್ನಾಗಿಮಾಡುತ್ತದೆ ಹೀಗಾಗಿ ಫಿಲ್ಲಿಪ್ಸ್ ದ್ವಿವಿಧ ಕಾರ್ಯವನ್ನು ಳ್ಳುದಾಗಿದೆ. ನಿಮ್ಮ ಹೊಟ್ಟೆಯಲ್ಲಿ ಅಧಿಕ ಆಮ್ಲರಸವನ್ನು ನಿವಾರಿಸುವದು ಮತ್ತು ನಿಮ್ಮ ಕರುಳನ್ನು ಸಮರ್ಥವನ್ನಾಗಿಯೂ ನಿರ್ಮಲಕರವಾಗಿಯೂ ಇಡುವದು.

ನೀವು ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾವನ್ನು ಎಲ್ಲಾ ಒಳ್ಳೇ ಔಷಧ ಷಾಪುಗಳಿಂದಲೂ, ದೊಡ್ಡ ಅಂಗಡಿಗಳಿಂದಲೂ ಕೊಂಡುಕೊಳ್ಳಬಹುದು. ದ್ರಾವಕ ರೂಪದಲ್ಲಿ ನಿಮ್ಮ ಮನೆವಾರ್ತೆಯ ಉಪಯೋಗಕ್ಕಾಗಿಯೂ ನಿಮ್ಮ ಜೇಬಿನಲ್ಲಿಡಲನುಕೂಲವಾಗಿ ಸುವಾಸನಾಯುಕ್ತ ಬಿಲ್ಲೆಗಳ ರೂಪದಲ್ಲಿಯೂ ಸಿಗುವುದು.

M. 34 V.

THE POPULAR INSURANCE COMPANY, LIMITED,

Head Office: MANGALORE, S. India.

The Pioneer of Life Assurance in British Karnataka.

Chief Agents for Dharwar, Bijapur and Belgaum Districts.

G. N. MADIMAN & SONS

MERCHANTS & BANKERS

HUBLI.

Pandit Bank,

MANGALORE.

ಪಂಡಿತ್ ಬೇಂಕ್,

ಕೋರ್ಟು ರಸ್ತೆ, ಮಂಗಳೂರು.

ಕರೆಂಟ್, ಸೇವಿಂಗ್ಸ್ ಬ್ಯಾಂಕ್, ವ
ಕಾಯಂ ಠೇವಣಾತಿ ಯಾನೆ ಫಿಕ್ಸ್‌ಗಳನ್ನು
ಪಡಕೊಳ್ಳುವದೂ, ಚಿನ್ನಾಭ ವಗೈರೆಗಳ
ಈಡಿನ ಮೇಲೆ ಹಣ ಎಡ್ವಾನ್ಸ್ ಕೊಡುವದೂ,
ಸೇಫ್ ಡಿಪೊಜಿಟ್ ಪಡೆಯುವ ವಗೈರೆ
ಯಾವತ್ತೂ ಬ್ಯಾಂಕಿಂಗ್ ಕೆಲಸಗ ಇತರ
ಸುಲಭವಾಗಿ ಬಡ್ಡಿ ವ ಶರತಗಳೊಡನೆ ಮಾಡೋ
ಣಾಗುತ್ತದೆ.

ಈ ಬ್ಯಾಂಕ್ ಲಿಮಿಟೆಡ್ ಲಾಯ್ಬೆಲಿಟಿ
ಯದು ಅಲ್ಲವಾದುದರಿಂದ ಡಿಪೊಜಿಟರಿಗೆ ಹೆಚ್ಚಿನ
ಭದ್ರತೆ ಉಂಟು.

**ಚಿನ್ನಾಭರಣಗಳ ಈಡಿನ ಮೇಲೆ ಈ
ಕೆಳಗಿನ ಬಡ್ಡಿ ದರಗಳಲ್ಲಿ
ಎಡ್ವಾನ್ಸ್ ಮಾಡೋಣಾಗುತ್ತದೆ.**

ರೂ. 50ರ ತನಕ ಸೇ. 8%
ರೂ. 51ರಿಂದ ರೂ. 500ರ ತನಕ ಸೇ. 7%
ರೂ. 501ರಿಂದ ಮೇಲ್ಪಟ್ಟು ಸೇ. 6½%
ಬಡ್ಡಿ ದರವನ್ನು ಈ ತಿಂಗಳ ಮೊದಲ್ಗೊಂಡು
ತಬ್ದಿಲು ಮಾಡಿದೆ.—

ಚಾಲ್ತಿ ಠೇವಣಾತಿ:

ಪ್ರತಿದಿನದ ಶಿಲ್ಕಿನ ಮೇಲೆ ಸೇ. 1 %
ಸೇವಿಂಗ್ಸ್ ಬ್ಯಾಂಕ್: ಸೇ. 3 %

ನಿರಖು ಠೇವಣಾತಿ:

6 ತಿಂಗಳುಗಳಿಗೆ ಸೇ. 3½ %
1 ವರ್ಷಕ್ಕೆ ಸೇ. 4 %

PANDIT SHIVA RAO, B.A., LL.B.
PROPRIETOR.
PANDIT SANJIVA RAO, B.A.
AGENT.

JAYA LAXMI BANK, LTD., MANGALORE.

ಜಯಲಕ್ಷ್ಮೀ ಬೇಂಕ್, ಲಿಮಿಟೆಡ್, ಮಂಗಳೂರು.

(ಸ್ಥಾಪಿಸಲ್ಪಟ್ಟದ್ದು—1923)

ಶಾಖೆಗಳು: ಪುತ್ತೂರು, ಕಾಸರಗೋಡು, ಚಿಕ್ಕಮಗಳೂರು, ಮೂಡಿಗೆರೆ, ಕಣ್ಣಾನೂರು, ಕಲ್ಲಿಕೋಟೆ, ಕುಂಡೊಟ್ಟ, ಮಾಲಾಪ್ಪುರಂ, ಮಂಗಳೂರು ಮತ್ತು ಮಂಜೇಶ್ವರ.

ಅಧಿಕೃತ ಮೂಲಧನ . . .	ರೂ. 5,00,000
ಅರ್ಪಿಸಲಾದ ಮೂಲಧನ . . .	ರೂ. 2,50,000
ಚೆಂದಾಹಾಕಿದ ಮೂಲಧನ . .	ರೂ. 1,82,000
ತೆತ್ತ ಮೂಲಧನ . . .	ರೂ. 1,75,385
ಕ್ಷೇಮ ಮತ್ತಿತರ ನಿಧಿಗಳು . .	ರೂ. 1,20,753

ಕಾಯಂ ಠೇವಣಾತಿಗಳು..

3 ತಿಂಗಳ ಠೇವಣಾತಿಗಳಿಗೆ-ಸೇ. 2½%; 6 ತಿಂಗಳ ಠೇವಣಾತಿಗಳಿಗೆ-ಸೇ. 3%;
12 ತಿಂಗಳ ಠೇವಣಾತಿಗಳಿಗೆ—3½%. 24 ತಿಂಗಳ ಠೇವಣಾತಿಗಳಿಗೆ—4%.

ಮಾಸಿಕ, ಸೇವಿಂಗ್ಸ್ ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಬಂಗಾರ, ಸರಕು ಈಡಿನ ಮೇಲೆ, ಸಾಲವನ್ನು ಕೊಡುವುದು.

U. Shanker Bhat
ಸೆಕ್ರೆಟರಿ

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:— ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡು ಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕ ಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯೆ 1—2—0 ಅಂಚೆವೆಚ್ಚ ಬೇರೆ.

ಚ್ಯವನಪ್ರಾಶ.— ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು ೧ಕ್ಕೆ ರೂ. 3—0—0 ಅಂಚೆವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಬಂದೆರಡು ದಿವಸಗಳಲ್ಲೇ ಅಂಕುಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು – ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು. ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2—0—0 ಪೋಸ್ಟೇಜು ವಗೈರೆ ಬೇರೆ.

ಶ್ರೀ। ಪಿ. ಮಹಾಬಲ ಹೆಬ್ಬಾರ್,
ತೀರ್ಥಹಳ್ಳಿ, ಇವರನ್ನು ಮೈಸೂರು ಸಂಸ್ಥಾನದ ನಮ್ಮ ಏಜೆಂಟರನ್ನಾಗಿ ನೇಮಕಮಾಡಿಯದೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ. ಕನ್ನಡ.

(ರಿಜಿಸ್ಟರ್ಡ್)

ಬಾಲಾರ್ಕಮಧು

ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದೆ.

ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗ್ರಹಣಿ; ಅತಿಜ್ವರವನ್ನು ಹೋಗಲಾಡಿಸುವುದು. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಮಧುರವಿದೆ.

ಬೆಲೆ: 0–12–0, ಟ. ಖ. 0–9–0.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ.

ಧಾರಾಳ ಕಮಿಶನ್ ಕೊಡಲ್ಪಡುವುದು. ಬರೆಯಿರಿ:—

ಯಂ ವಿ. ಪ್ರಸಾದಿಕ ಔಷಧಾಲಯ,
ಶಿವಮ್ಮೊಗ್ಗಾ.(ಮೈಸೂರು ಸೀಮೆ)

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ

?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಲಂಬಗಾರರೆ? ಅಥವಾ ಜಡುರಂಗ ಆಡುವವರೆ? ನೀವು ಯಾರಾದರೂ ಸರಿ–ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ ಸ್ಫೂರ್ತಿಯೂ ತೋರಿ ಬರುವುದು. ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ (ಟಪ್ಪಾಲು ಖರ್ಚು ಪ್ರತ್ಯೇಕ.)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,

ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕ್ ಟೌನ್, ಮದರಾಸು.

ಅಮೆರಿಕದ ಮಿಶನ್!

ಯುದ್ಧ ಕಾಲದಲ್ಲಿ "ಮೆಶಿನ್"ಗಳು (ಯಂತ್ರಗಳು) ಧಾರಾಳ ಬೇಕು; ಹಾಗೇ "ಮಿಶನ್"ಗಳೂ (ಶಿಷ್ಟ ಮಂಡಲಗಳು) ಧಾರಾಳವಾಗಿ ಇರಬಾರದೇಕೆ? ಅಮೆರಿಕದಿಂದ ಒಂದು ಮಿಶನ್ ಬೇಗನೇ ಭಾರತಕ್ಕೆ [illegible] ವುದೆಂದು ವಾಷಿಂಗ್ ಟನ್ನಿನ ವ[illegible]ದು ಈ ದೇಶದ ಯುದ್ಧ ನಿರ್ಮಾಣ ಕಾರ್ಖಾನೆಗಳ ಕೆಲಸವನ್ನು ತ್ವರೆಗೊ[illegible]ಲು ಬರುವುದಂತೆ; ಬರಲಿ! ೧೯೪೦ರಲ್ಲಿಯೂ ಸರ್ ಅಲೆಕ್ಸಾಂಡರ್ ರೋಗರ್‌ನಿಂದ ಮುನ್ನಡೆಸಲ್ಪಟ್ಟು ಒಂದು ಬ್ರಿಟಿಷ್ ಸರಬರಾಯಿಯ ಮಿಶನೂ ಇಲ್ಲಿಗೆ ಬಂದಿತ್ತು. ಅದರ ಉದ್ದೇಶವು, ಮಧ್ಯ-ಪೂರ್ವದ ಸೇನೆಗಳಿಗೆ ಇಲ್ಲಿಂದ ಸರಬರಾಯಿ ಮಾಡಿಸುವುದಷ್ಟೇ ಅಲ್ಲ; ಭಾರತೀಯ ಕೈಗಾರಿಕೆ ಕಾರ್ಖಾನೆಗಳ ಕೆಲಸಕಾರ್ಯಗಳನ್ನು ತ್ವರೆಗೊಳಿಸುವ ಬಗೆಗೆ, ಯಾವ ಉಪಾಯಗಳನ್ನು ಕೈಕೊಳ್ಳಬೇಕೆಂದು ಸೂಚಿಸುವುದೂ ಆಗಿತ್ತು. ಆ ರೋಗರ್ ಮಿಶನ್ ಈ ವಿಚಾರದಲ್ಲಿ ಸೂಕ್ತವಾದ ಸೂಚನೆಗಳನ್ನು ಕೊಟ್ಟಿತೆಂದು ಜನರು ಹೇಳುತ್ತಾರೆ. ಆದರೆ ನಿಜವಾಗಿ ಅದರಲ್ಲಿ ಯಾವ ಶಿಫಾರಸುಗಳಿದ್ದುವೆಂದು ಕಂಠೋಕ್ತವಾಗಿ ತಿಳಿಯುವ ಸಂದರ್ಭವೇ ನಮಗೆ ಉಂಟಾಗಲಿಲ್ಲವೇತಕ್ಕೆಂದರೆ, ಅವರ ಆ ಶಿಫಾರಸ್ಸಿನ ವರದಿ, ಇಂದಿನ ವರೆಗೂ ಬೆಳಕಿನ ಮುಖವನ್ನೇ ಕಾಣಲಿಲ್ಲ. ಇದೂ ಸಾಲದೆಂಬಂತೆ, ಹಿಂದೂಸ್ಥಾನದ ಕಾರ್ಖಾನೆಗಳ ಮಾಲಕರೂ, ಹಿಂದೂ ಸ್ಥಾನದಲ್ಲಿ ವಿಶಾಲ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶ ಕೊಡಿ ಎಂದು ಪದೇಪದೇ ಅಧಿಕಾರಿಗಳನ್ನು ಒತ್ತಾಯ ಪಡಿಸುತ್ತಿದ್ದುದಾದರೂ ನಮಗೆ ತಿಳಿಯದ ವಿಚಾರವಲ್ಲ; ಆದೂ ವ್ಯರ್ಥವಾಯಿತು. ಅನ್ನುವಾಗ ಪ್ರಭುತ್ವದವರು ಹೀಗೆ ಈ ವಿಷಯದಲ್ಲಿ ಯಾವುದರಲ್ಲಿಯೂ ತಕ್ಕ ಚಟುವಟಿಕೆಯನ್ನಾಗಲೀ, ಶೃದ್ಧೆಯನ್ನಾಗಲೀ ಪ್ರದರ್ಶಿಸುವ ದೃಷ್ಟಾಂತಗಳನ್ನು ಕೊಡದಿರುವ ಸಂದರ್ಭದಲ್ಲಿ, ಅಮೆರಿಕದ ಮಿಶನ್ ಆಗಲಿ, ಇನ್ನು ಯಾವ ಮಿಶನೇ ಆಗಲಿ ಭಾರತಕ್ಕೆ ಬಂದೂ ಮಾಡುವುದೇನೋ!

* * * *

ಇಂಡಿಯದ ಸ್ವಾತಂತ್ರ್ಯದ ವಿಚಾರದ ಕುರಿತು,—

ಚೀನದ ಅಧಿಕಾರಿವರ್ಗದ ಪತ್ರಿಕೆಯೊಂದು ಮಿತ್ರರ ಅವಗಾಹನೆಗಾಗಿ ಈ ಕೆಳಗಿನ ಸೂಚನೆಗಳನ್ನು ಮಾಡಿದೆ. ಭಾರತದ ಜನರು, ಒಬ್ಬ ಮನುಷ್ಯನಂತೆ ಏಕದೇಹನ್ಯಾಯದಿಂದ, ಜತೆಗೂಡಿ ನಿಲ್ಲಬೇಕು. (೨) ಭಾರತೀಯರು ತಮ್ಮ ಸ್ವಾತಂತ್ರ್ಯಕ್ಕಾಗಿ ಹೆಚ್ಚಿನ ಬೆಲೆ ತೆರಲು ಸಿದ್ಧರಾಗಿರಬೇಕು. (೩) ಡೊಮಿನಿಯನ್‌ಗಳೊಡನೆ ವ್ಯವಹರಿಸುವಲ್ಲಿ ಬ್ರಿಟಿಷರು ಯಾವ ಯೋಜನೆಯನ್ನು ಮುಂದಿಟ್ಟುಕೊಂಡಿರುವರೊ, ಅದರಂತೆಯೇ ಭಾರತದಲ್ಲಿನ ವ್ಯವಸ್ಥೆಯನ್ನೂ ಅವರು ಮಾಡಬೇಕು. ಅಷ್ಟೇ ಅಲ್ಲ; ಈಗಿನ ಯುದ್ಧವು ಜಗಳಗಂಟತನದ ವಿರುದ್ಧವಾಗಿ ನಡೆಯತಕ್ಕ ಒಂದು ಸಾಮಾನ್ಯವಾದ ಸಮರವೆಂದು ಭಾರತೀಯರು ತಿಳಿದಿರಬೇಕಾಗಿಯೂ ಈ ಲೇಖದಲ್ಲಿ ಭಾರತೀಯರನ್ನು ಎಚ್ಚರಿಸಲಾಗಿದೆ. ಸರಿಯೇ. ಆದರೆ ಇದರಲ್ಲಿ ಮೊದಲನೆಯ ಸೂಚನೆಯ ಅರ್ಥ ಸ್ಪಷ್ಟವಾಗಿಲ್ಲ. ಭಾರತದ ಜನರೆಲ್ಲರೂ ಒಬ್ಬ ಮನುಷ್ಯನಂತೆ, ಏಕದೇಹನ್ಯಾಯದಿಂದ ಜತೆಗೂಡಿ ನಿಲ್ಲದ ವಿನಾ, ಇಂಡಿಯದ ಜನರ ಸ್ವಾತಂತ್ರ್ಯದ ಪ್ರಶ್ನೆಯನ್ನು ಆಲೋಚಿಸಲಾಗುವುದಿಲ್ಲವೆಂದು ಅದರ ಅರ್ಥ ವಿರಬಹುದೇ? ಈ ಸೂಚನೆಯ ಅರ್ಥ ಅದೇ ಆಗಿರುವುದಾದರೆ, ಆ ಷರತ್ತನ್ನು ಚೀನವು ತಾನೇ ಪೂರೈಸಲು ಅಶಕ್ತವಾಗಿದೆ ಎಂದೆನ್ನಬೇಕಾಗಿದೆ. ನಿಜವಾಗಿಯೂ ಚೀನಾದ ಜನಗಳು ಒಬ್ಬ ಮನುಷ್ಯನಂತೆ, ಏಕದೇಹನ್ಯಾಯದಿಂದ ಜತೆಗೂಡಿ ನಿಂತಿದ್ದರೆ, ನಾನ್ಕಿಂಗಿನಲ್ಲಿ ಯಾವುದಾದರೂ ಒಂದು ಕೈಗೊಂಬೆ ಸರಕಾರದ ಸ್ಥಾಪನೆಗೆ ಅವಕಾಶವಿರುತ್ತಿತ್ತೇ?

* * * *

ಪೂರ್ವ ದೇಶಗಳಲ್ಲಿ ಮಿತ್ರರಾಷ್ಟ್ರಗಳಿಗೆ

ಅಗತ್ಯವಾದುದೆಂದರೆ—ಯುದ್ಧ ಚಾತುರ್ಯ, ವೇಗತೆ ಮತ್ತು ಐಕ್ಯ ಇವುಗಳೇ ಎಂದು ಲಂಡನಿನ ಚೀನಾ ರಾಯಭಾರಿಗಳ ಮಾತು. ಜಪಾನರು ಪ್ರಚಾರ ಕಾರ್ಯ ನಡೆಸುತ್ತ, ಅಸ್ಯಾದವರ ಮನಸ್ಸಿನಲ್ಲಿ ವಿಷ ಬೆರಿಕೆ ಮಾಡುತ್ತಿದ್ದಾರೆ, "ಬರ್ಮಾ ಬರ್ಮಿಯರಿಗೆ, ಇಂಡಿಯಾ ಇಂಡಿಯದವರಿಗೆ" ಎಂಬ ಮೊಳ ಕೈ ಬೆಲ್ಲ ಸವರುತ್ತಿದ್ದಾರೆ ಎಂದು ಅವರ ಹೇಳಿಕೆ. ಇವು ನಿಜವಿರಬಹುದು. ಹಾಗೂ ಬರ್ಮಿಯರಿಗೂ ಭಾರಿಗೂ ಜಪಾನ್ಯರ ಈ ಸಕ್ಕೆ ಮಾತುಗಳಲ್ಲಿ ಎಷ್ಟು ವಿ[illegible] ಬೇಕೆಂಬುದೂ ಚೆನ್ನಾಗಿ [illegible] ಬಹುದು. ಇದರಲ್ಲಿ ಸ್ವಾರಸ್ಯ ವೇನೆಂದರೆ,—ಮಿತ್ರರ ಯುದ್ಧ ದುರ್ಬಲವಾದ ಸ್ಥಾನವೆಲ್ಲಿದೆ [illegible] ಚೀನಾ ರಾಯಭಾ[illegible] ಸೂಚಿಸಿರುವುದೇ. ವ[illegible] ದಷ್ಟು ಜಪಾನರ ಪ್ರ[illegible] ಕಾರ್ಯದ ಹೆಸರಿನ[illegible] ಬಹುದಾದ ಒಂದು ಸಮ್ಮೋ[illegible] ಉಪಾಯವು ಯಾವುದೆಂ[illegible] ಮಿತ್ರ ವರ್ಗದವರು ಯಾರ್ಯಾ[illegible] ತ್ತಿರುವರೋ, ಆ ಅಧೀನ ಜನ[illegible] ರಾಜಕೀಯ ಆಶಾಕಾಂಕ್ಷೆಗಳ[illegible] ಸ್ವಲ್ಪವಾದರೂ ಎರೋ[illegible] ಬರ್ಮಿಯರಿಗೂ, ಇಂಡಿಯದವರಿಗೂ ತಮ್ಮ ಇತರ ಅಧೀನ ಜನಾಂಗದ[illegible] ತಮ್ಮ ಸಮಾನವಾದ ಸ್ಥಾಟನ ಸಂತೋಷದಿಂದ ಕೊಟ್ಟುಬಿಡಲು ವಿರುವೆವೆಂದೂ ತಮ್ಮ ವರ್ತನದಿಂ[illegible] ಖಚಿತಪಡಿಸುವುದೇ! ಮತ್ತೆ ಹಾಗೆ ಕೊಡುವೆವೆಂಬ ಮಾತು ನಾಳೆಗಲ್ಲ; ಆದನ್ನು ಅವರು ಇಂದೇ ಕೊಟ್ಟರೆ ಕೊಟ್ಟ ಹಾಗೆ! ಅಷ್ಟೆ.

ಕಳೆದ ವಾರ

ಶತ್ರುವನ್ನು

ಭಾರತದಿಂದ

ದೂರವಿರಿಸಿ

ಗವರ್ನರರ ಯುದ್ಧ ನಿಧಿಗೆ

ಪುನಃ

ಧನ ಸಹಾಯಮಾಡಿ.

ಡಿಫೆನ್ಸ್ ಬಾಂಡುಗಳು ಮತ್ತು ಸೇವಿಂಗ್ಸ್ ಸರ್ಟಿಫಿಕೇಟು ಗಳನ್ನು ಹೆಚ್ಚು ಹೆಚ್ಚಾಗಿ ಕೊಂಡುಕೊಳ್ಳಿ.

ಚಂದಾ ಕೊಡಿ V

ವಿಜಯಕ್ಕಾಗಿ

V ಸಾಲ ಕೊಡಿ

Guaranteed For Purity..

BEST CASTOR OIL

TASTELESS KP ODOURLESS.

ಶುದ್ಧಮಾಡಿದ ಹರಳೆಣ್ಣೆ ವಾಕರಿಕೆ ಕರಿಂಜಿಲ್ಲವೆಂದು ಡಾಕ್ಟರಗಳಿಂದ ಸರ್ಟಿಫೈಮಾಡಿದ್ದು

CASTOR OIL WORKS, COIMBATORE.

K.P. Castor Hair Oil

ಬಹಳ ತಂಪು, ಚೇ[illegible] ದಾಯಕ, ಉತ್ತಮ [illegible] ಮಳ, ಕೂದಲು [illegible] ಸಲು ಸಹಾಯಕವಾಗು[illegible] ತ್ತಿದೆ. ಕಾಂತಿ ಗೂಡಿ[illegible] ಸುತ್ತದೆ. ಕೂದಲು ಬಾಚಿ ಅಣಿ ಮಾಡುವರೆ ನೆರವಾಗುತ್ತದೆ.

ಅತ್ಯುತ್ತಮವಾದ ಕೂದಲು ಶಕ್ತಿವರ್ಧಕ ಒಮ್ಮೆ ಪರೀಕ್ಷಿಸಿರಿ.

Announcement

We have great pleasure in announcing an all round reduction in rates of interest on advances.

Our present rates are:

Personal Loans & Overdrafts	....	7½% p. a.
Usance Bills	....	7 % p. a.
Trade Bills	....	6 % p. a
Loans on Produce	....	5½% p. a.
Loans on Insurance Policies Stocks & Shares		5 % p. a
Loans on Gold	....	4½% p. a.

The above rates are for medium-sized loans. The rates for small loans will however be slightly higher since the cost of time, labour and stationery consumed in such cases is proportionately higher.

CANARA BANK, LIMITED.

ESTD: 1906.

ಈ ವಾರದ ಕತೆ

ಭಾಗ್ಯಚಕ್ರ

[ಲೇಖಿಕಾ: ಕುಮಾರಿ ಲಲಿತಾ, ಕಾರ್ಕಳ]

ಾ! ನಿನ್ನಂತಹ ಮಡದಿಯನ್ನು
ನೀ ಧನ್ಯ!"
! ಹಾಗೇಕೆ ನ್ನುವಿರಿ?
ಸುಖದುಃಖಗಳಲ್ಲಿ ಭಾಗಿನಿ
ನುಮನದಿಂದ ಆತನ ಸೇವೆ
ಾಡುವುದೇ ಸತಿಯ ಕರ್ತವ್ಯ

ಾ! ವಿ ಮಾತುಗಳು ಎಷ್ಟು
ತಿಯೊಬ್ಬ ಭಾರತ
ತ್ಯ ಬೆಡಗು ಬಿನ್ನಾ
ಕದೆ, ತಮ್ಮ ತಮ್ಮ
ರನ್ನು ಸ್ವದೇಶಸೇವೆಗಾಗಿ
ಸಿದರೆ, ಶೀಘ್ರದಲ್ಲಿಯೇ
ತೆಯ ದುಃಖದಾರಿದ್ರ್ಯವು
ಾಗದಿರದು."

ಾ! ಅಷ್ಟೇಕೆ ನನ್ನನ್ನು
ದಂತರಿಲ!ಈ ದಿನ
ಷ್ಟು ಹರಿಜನ ಮಕ್ಕಳನ್ನು ಶಾಲೆಗೆ
ನಿರಿ?"

ಕೆಲಸದಲ್ಲಿ ಇಂದು ಹೆಚ್ಚಿನ
ದೊರೆಯಲಿಲ್ಲ. ಆದರೆ ಈ ಕಲ
ಶೀಘ್ರದಲ್ಲಿಯೇ ಫಲಕೊಡುವ
ಂಬ ಭರವಸೆ ಇದೆ. ಆದರೆ ಪ್ರೀಯೆ!
ನಮ್ಮೀ ಪ್ರೇಮವು, ಅಂತ್ಯದ ವರೆಗೆ
ಹೀಗೆಯೇ ಉಳಿಯುವುದೋ, ನಾವು
ಅಂತ್ಯದ ವರೆಗೆ ಹೀಗೆಯೇ ಕೂಡಿ ಬಾಳು
ವೆವೋ ಎಂಬುದರಲ್ಲಿ ನನ್ನ ಮನಸ್ಸು
ಳ್ಳಮಳಗೊಳ್ಳುತಿರುವುದು."

ಈ ಮಾತುಗಳನ್ನು ಕೇಳಿದೊಡನೆ,
ು ಬಲಕಣ್ಣು ಹಾರಿತು. ಕಣ್ಣು
ೀರು ತುಂಬಿತು. ಆಕೆಯ ಕಂಠವು
ಗದಿತವಾಯಿತು. ಕಾಂತಿಯುಕ್ತ
ವಾದ ಆಕೆಯ ಮುಖಕಮಲವು ಮೋಡ
ಮುತ್ತಿದ ಚಂದ್ರನಂತೆ ಕಳೆಗುಂದಿತು.
ಆಕೆಯ ಹೃದಯದಲ್ಲಿ 'ಏನಾದರೂ
ಅನಾಹುತವು ಘಟಿಸಿದರೆ?" ಎಂಬ ಶಂಕೆ
ಮೂಡಿತು. ತನ್ನ ಹೃದಯೇಶ್ವರನ
ಅಭದ್ರವೂ, ಅಶುಭವೂ ಆದ ಈ
ಮಾತನ್ನು ಕೇಳಿ, ಆಕೆಗೆ ಎಷ್ಟು ದುಃಖ
ವಾಗಿರುವುದೆಂಬುದನ್ನು ಒಡೆದು ಹೇಳು
ವುದಕ್ಕಿಂತ, ಕಲ್ಪನೆಯಿಂದ ತಿಳಿಯುವುದೇ
ಉಚಿತವು. ಆದರೂ, ಆಕೆಯು ಉಕ್ಕಿ
ಬರುವ ದುಃಖವನ್ನು ತಡೆದು "ನಾನು
ತಮ್ಮನ್ನು ನನ್ನ ಹೃದಯಸಿಂಹಾಸನದಲ್ಲಿ
ರಿಸಿಕೊಂಡಿರುವೆನು. ನನ್ನ ಹೃದಯಕ್ಕೆ
ತಾವು ರಾಜರಾಗಿರುವಿರಿ. ನನ್ನ
ಪ್ರೇಮವು ನಿಶ್ಚಲವೂ, ನಿರ್ಮಲವೂ ಆಗಿ
ರುವದೆಂಬುದು ನಿಮಗೆ ಗೊತ್ತಿದ್ದರೂ,
ಹೀಗೆ ಹೃದಯವಿದಾರಣವಾದ ಮಾತು
ಗಳನ್ನಾಡಬಹುದೇ?" ಎಂದಳು.

ಈ ಪ್ರೇಮಪೂರಿತ ಮಾತುಕತೆಗಳು,
ಬೆಂಗಳೂರಿನ ಒಂದು ಭವ್ಯ ಭವನದಲ್ಲಿ
ನಡೆದುವು. ಯುವಕನು ಬೆಂಗಳೂರಿನ
ಒಬ್ಬ ಡಾಕ್ಟರರ ಪುತ್ರ ದಿನೇಶನಾಗಿ
ದ್ದನು. ಆತನು ದೇಶಭಕ್ತನೂ, ಸುಗು
ಣಿಯೂ, ಸುವಿಚಾರಿಯೂ ಆಗಿದ್ದನು.
ಸುಧೆ ಆತನ ಪತ್ನಿ. ಇವರ ವಿವಾಹವು
ಜರುಗಿ ಮೂರು ವರ್ಷಗಳು ಕಳೆದಿ
ದ್ದುವು. ದಿನೇಶನು ಸುಧೆಗೆ ಪ್ರಾಣ
ಕ್ಕಿಂತ ಎಮಿಗಿಲಾಗಿದ್ದನು.

ಸುಧೆಯ ಮಾತು ಮುಗಿಯುವುದ
ರೊಳಗೆ, ಟಪ್ಪಾಲು ಜವಾನನು ದಿನೇಶನ
ಹೆಸರಿನ ಒಂದು ತಾರನ್ನು ತಂದನು.
ಆದರಲ್ಲಿ ಸುಧೆಯ ತಾಯಿಗೆ ವಿಪರೀತ
ಕಾಯಿಲೆಯಾದುದರಿಂದ ಸುಧೆಯನ್ನು
ಕಳುಹಿಸಬೇಕೆಂದು ಬರೆದಿತ್ತು. ಇದನ್ನು
ಕೇಳಿದೊಡನೆ, ಸುಧೆಯ ಮೇಲೆ ವಜ್ರಾ
ಘಾತವಾದಂತಾಯಿತು. ದಿನೇಶನಿಗೆ
ವಿಪರೀತ ಕೆಲಸವಿದ್ದುದರಿಂದ, ಆತನು
ಸುಧೆಯನ್ನೂ, ಪುತ್ರಿ ವಸಂತಿಯನ್ನೂ
ಮದ್ರಾಸಿಗೆ ಕಳುಹಿಸಿದನು.

ಸ್ತ್ರೀ ಇಲ್ಲದ ಮನೆಯು ಹೂಗಳಿ
ಲ್ಲದ ತೋಟಕ್ಕೆ ಸರಿಯಲ್ಲವೇ? ಹೂವಿ
ಲ್ಲದ ತೋಟದಲ್ಲಿ, ಭ್ರಮರವು ಸಂತೋಷ
ದಿಂದ ಝೇಂಕರಿಸುತ್ತಾ ಸುಳಿಯಬ
ಲ್ಲುದೇ? ದಿನೇಶನಿಗೆ ಸುಧೆ ಇಲ್ಲದ ಮನೆ
ಸ್ಮಶಾನಕ್ಕೆ ಸರಿಯಾಗಿ ಕಾಣತೊಡಗಿತು.
ಸುಧೆಯ ವಿರಹದ ನಾಲ್ಕು ದಿನಗಳು,
ದಿನೇಶನಿಗೆ ನಾಲ್ಕು ವರ್ಷಗಳಂತೆ ಭಾಸ
ವಾದುವು. ಈ ದಿನ ತನ್ನ ಕೆಲಸವನ್ನು
ಮುಗಿಸಿ ಉದ್ಯಾನವನದಲ್ಲಿ ತಿರುಗಾ
ಡುತ್ತಾ ಇದ್ದಹಾಗೆ, ಆತನ ಕಣ್ಣುಗಳ
ಮುಂದೆ ಸುಧೆಯ ಸುಂದರ ಚಿತ್ರವು
ಮೂಡಿತು. ಆಗಲೇ ಆತನು ಅವಳನ್ನು
ಬರಮಾಡಿಸುವ ಉಪಾಯವನ್ನು ಆಲೋ
ಚಿಸಿದನು. ಕೂಡಲೇ ಆತನಿಗೆ ಒಂದು
ಉಪಾಯ ಹೊಳೆಯಿತು. ಆತನು ತನಗೆ
ಜಡ್ಡಾಗಿರುವುದರಿಂದ, ಸುಧೆಯನ್ನು
ಕೂಡಲೇ ಕಳುಹಿಸಿರಿ ಎಂದು ಸುಧೆಯ
ತಂದೆಗೆ ತಾರು ಬಿಟ್ಟನು.

ತಾರನ್ನು ನೋಡಿದ ಕೂಡಲೇ,
ಸುಧೆಯ ತಂದೆಯು ಗಾಬರಿಯಾದರು.
ಮರುದಿನವೇ ಪುತ್ರಿಯನ್ನು ಮಗುವಿ
ನೊಂದಿಗೆ ಬೆಂಗಳೂರಿಗೆ ಕಳುಹಿಸಿದರು.
ಪ್ರೇಮದ ಬಲೆಯಲ್ಲಿ ಸಿಲುಕಿದ ಪ್ರಾಣಿಯ
ಚಿತ್ತವು ಎಂದೂ ಸ್ಥಿರವಾಗಿ ಉಳಿಯ
ಲಾರದು. ತಾರನ್ನು ಬಿಟ್ಟ ನಂತರ ದಿನೇ
ಶನ ಕಣ್ಣು ಎದುರಿಗೆ, ಪತಿಯ ಅಸ್ಪಷ್ಟದ
ವಿಷಯವನ್ನು ಕೇಳಿ ದುಃಖಪೂರಿತಳಾದ
ಸುಧೆಯ ಚಿತ್ರವು ಸುಳಿಯಿತು. ದಿನೇ
ಶನು ಹೆದರಿದನು. ಮೊದಲೇ ತಾಯಿಯ
ರೋಗದಿಂದ ಕಂಗೆಟ್ಟ ಸುಧೆ ತನ್ನ ಅವ
ಸ್ಥೆಯನ್ನು ಕೇಳಿ, ಏನಾದರೂ ಪ್ರಾಣಕ್ಕೆ
ಅಪಾಯ ಮಾಡಿಕೊಂಡರೆ? ಎಂಬ
ವಿಚಾರದಿಂದ ಅವನ ತಲೆ ತಿರುಗಿತು.
ಮಾರನೆ ದಿನ ಆತನು ಕೂಡಲೇ ಮದ್ರಾ
ಸಿಗೆ ಹೊರಟನು. ಇತ್ತ ದಿನೇಶನು ಸುಧೆ
ಇದ್ದಲ್ಲಿಗೆ ಹೊರಟನು. ಅತ್ತ ಸುಧೆಯು
ದಿನೇಶನಿದ್ದಲ್ಲಿಗೆ ಹೊರಟಳು.

ಸುಧೆಯು ಕೂತ ರೈಲು ಬಂಡಿಯಲ್ಲಿ
ಆಕೆಯಷ್ಟೆ ವಯಸ್ಸಿನ ಒಬ್ಬ ಕುಲೀನ
ವಂಶದ ಹೆಂಗಸು ತನ್ನ ಒಂದು ಹೆಣ್ಣು
ಮಗುವಿನೊಂದಿಗೆ ಕುಳಿತಿದ್ದಳು. ಅವಳ
ಮಗುವಿನ ವಯಸ್ಸಾಯವೂ ಸುಧೆಯ ಮಗು



ಆಯಾಸವನ್ನು ಂಟುಮಾಡುವ

ರಾತ್ರಿ ಕೆಮ್ಮಲು

ಸಕಾಲದಲ್ಲಿ ಜಾಣ್ಮೆವಹಿಸಿ ರಾತ್ರಿ ವೇಳೆ ಹೆಚ್ಚಾಗಿ ಬರುವ ಕೆಮ್ಮಲಿನಿಂದ ನಿದ್ದೆಯನ್ನೂ ಶಕ್ತಿಯನ್ನೂ ಕಳದುಕೊಳ್ಳದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಿ. ನೆನಪಿರಲಿ;—ಕೆಮ್ಮು ಬಂದ ಪ್ರಾರಂಭದಲ್ಲೇ

ಟಸ್ಸನಾಲ್

ಸೇವಿಸಿದಲ್ಲಿ ಇದು

ಕ್ಷಯಕ್ಕೆ

ತಿರುಗುವ ಸಂಭವವಿರಲಾರದು.

Agents: MARTIN & HARRIS, LTD., CALCUTTA & BOMBAY.

ವಿನ ಪ್ರಾಯದಷ್ಟೆ ಆಗಿತ್ತು. ದೇವರ ಸೃಷ್ಟಿಯಲ್ಲಿ ಮಗುವೆಂಬುದು ಒಂದು ಪವಿತ್ರ ವಸ್ತು. ಮಕ್ಕಳು ಬೇಗನೇ ತಮ್ಮೊಳಗೆ ಕಲೆತುಕೊಳ್ಳುವರು. ವಸಂತಿಯೂ ಅಪರಿಚಿತ ಹೆಂಗಸಿನ ಮಗುವೂ ಆಡಲು ಮೊದಲುಗೊಂಡುವು. ವಸಂತಿಯ ಕೈಯಲ್ಲಿ "ಸುಧಾ! ನನ್ನನ್ನು ಮರೆಯ ಬೇಡ" (Forget me not Sudha) ಎಂದು ಮನೋಹರವಾದ ಕಸೂತಿಯಿಂದ ಹೊಲಿದ ಒಂದು ರುಮಾಲು ಇದ್ದಿತು. ಇದನ್ನು ಸುಧೆಯೇ ಹೊಲಿದು ಪ್ರಿಯನಿಗೆ ಅರ್ಪಿಸಿದ್ದಳು.

ವಸಂತಿಯು ಆಡುತ್ತಾ ಆಡುತ್ತಾ, ಆ ರುಮಾಲನ್ನು ತನ್ನ ನೂತನ ಗೆಳತಿಯ ಕೈಗಿಕ್ಕಿದಳು. ಇದೇ ಸಮಯದಲ್ಲಿ ಎದುರಾಗಿ ಬರುವ ಒಂದು ರೈಲು, ಈ ರೈಲಿಗೆ ಡಿಕ್ಕಿ ಹೊಡೆದು, ಹೊಸ ಯುವತಿಯೂ ಅವಳ ಮಗುವೂ ಪರಂಧಾಮವನ್ನೈದಿದರು. ಸುಧೆಗೂ ವಸಂತಿಗೂ ವಿಪರೀತ ಪೆಟ್ಟಾಗದ್ದರಿಂದ, ಅವರು ಇನ್ನೊಂದು ರೈಲುಬಂಡಿಯಲ್ಲಿ ಹೊರಟರು. ರೂಪ ವಿಕಾರವಾದುದರಿಂದ ಮಡಿದ ಸ್ತ್ರೀಯಾರೆಂಬುದು ಯಾರಿಗೂ ತಿಳಿಯಲಿಲ್ಲ. ಗುರುತು ಹಚ್ಚುವ ಯಾವ ವಸ್ತುವೂ ಅವರ ಹತ್ತಿರವಿರಲಿಲ್ಲ. ಕೇವಲ ಒಂದು ರುಮಾಲು ಮಾತ್ರ ಇದ್ದಿತು. ಶವಗಳನ್ನು ರುಮಾಲಿನೊಂದಿಗೆ ಆಸ್ಪತ್ರೆಗೆ ಒಯ್ದರು.



ಹೊಟ್ಟಿನೋವು, ವಾಂತಿ, ಅಜೀರ್ಣ, ಕಾಲರಾ, ಸಟಿಬೇನೆ, ಬವಳಿ ಮುಂತಾದ ಅನೇಕ ಬೇನೆಗಳಿಗಾಗಿ

ಜವೇರಿಯನ್ನರ ಜೀವನ ಮಿಕ್ಶ್ಚರವು

ರಾಮಬಾಣದಂಥ ಉಪಾಯವಾಗಿದೆ. ಇದನ್ನು ಹೊಟ್ಟಿಯಲ್ಲಿ ತೆಗೆದುಕೊಳ್ಳಬಹುದು. ಇಲ್ಲವೆ ಮೈ ಮೇಲೆ ಲೇಪಿಸಬಹುದು. ಡಾಕ್ಟರ ಮತ್ತು ವೈದ್ಯರು ಇಲ್ಲದ ವೇಳೆಯಲ್ಲಿ ಜವೇರಿಯನ್ನರ ಜೀವನ ಮಿಕ್ಶ್ಚರದಂಥ ನೆರವಾಗುವಂಥ ಔಷಧವು ಮತ್ತೊಂದಿಲ್ಲ.

ಪಟ್ಟಣಗಳಲ್ಲಿ ಕೆಮಿಸ್ಟರ ಅಂಗಡಿಗಳಲ್ಲಿಯೂ ಹಳ್ಳಿಪಳ್ಳಿಗಳಲ್ಲಿ ಕಿರಾಣೀ ಅಂಗಡಿಗಳಲ್ಲಿಯೂ ಈ ಔಷಧವು ಮಾರಲಿಕ್ಕೆ ಸಿಗುತ್ತದೆ.

ಎಮ್. ಎಚ್. ಜವೇರಿಯನ ಮತ್ತು ಕಂಪೆನಿ,
ದೇವಕರಣ ಮ್ಯಾನ್ಶನ್,
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ, ೨.

ಸುಧೆ ಮನೆಗೆ ಹಿಂತಿರುಗಿದಳು. ಮದ್ರಾಸಿಗೆ ಹೊರಟ ದಿನೇಶನಿಗೆ ರೈಲಿನ

(೧೦ನೇ ಪುಟಕ್ಕೆ ಮುಂದುವರಿಸಿಯದೆ)

ಪ್ರಪಂಚದ ಪಾನಿಪತ್ತು

ಭಾರತದ ಮುಖಂಡರೇನು ಮಾಡುವರು?

ಯುದ್ಧ ಭಾರತದ ಸಮೀಪಕ್ಕೆ ಬರುತ್ತಿರುವಂತೆ, ಬ್ರಿಟಿಷ್ ಜನತೆಯ ಅಭಿಪ್ರಾಯವೂ ಬದಲಾಗತೊಡಗಿದೆ. ಆ ಒಪ್ಪಂದಕ್ಕೆ ಕಟ್ಟುಬಿದ್ದು, ಭಾರತದ ಜನವರ್ಗವೆಲ್ಲವೂ ಹೃತ್ಪೂರ್ವಕವಾಗಿ ಸಹಕರಿಸುವಂತೆ, ಬ್ರಿಟಿಷ್ ಅಧಿಕಾರಿವರ್ಗವೂ ಏನಾದರೊಂದಿಷ್ಟನ್ನು, ಅನಿವಾರ್ಯಪಕ್ಷದಿಂದ, ಭಾರತಕ್ಕೆ ಕೊಟ್ಟಂತೆ ಮಾಡಬೇಕಾಗಿದೆ. ಆದರೆ ಅವರೇನು ಕೊಡುವರೆಂಬುದನ್ನು, ವಿಚಕ್ಷಣ ಹಿಲ್ಲರು ಈಚೆಗೆ ಮಾಡಿದ 'ಹೌಸ್ ಆಫ್ ಕಾಮನ್ಸ್'ನ ಭಾಷಣದಲ್ಲಿಯೂ ಸ್ಪಷ್ಟವಾಗಿ ತಿಳಿಸದಿರುವಾಗ, ಅದಿನ್ನು ಸರ್. ಕ್ರಿಪ್ಸ್‌ರು ಇಲ್ಲಿಗೆ ಬಂದ ಮೇಲೆ ಮಾತ್ರವೇ ತಿಳಿಯಬೇಕೆಂದಾಯಿತು. ಅಂತೂ ನಮ್ಮ ಭಾಗಕ್ಕೆ ಅದೀಗ ಕನ್ನಡಿಯ ಗಂಟು. ಮುಂದೆಯೂ ಅದು ಹಾಗೇ ಉಳಿಯದಿದ್ದರೆ ಸಾಕು. ಅದು ದರಿಂದಲೇ ಸದ್ಯ ಮಹಾತ್ಮರೂ, ಪಂಡಿತ ನೆಹರುಗಳೂ ಏನನ್ನೂ ಈ ವಿಚಾರದಲ್ಲಿ ಹೇಳದೆ ಸುಮ್ಮನಿದ್ದಾರೆ. ಆದುದರಿಂದಲೇ ಶ್ರೀ। ಸಿ. ಆರ್. ಆಚಾರಿಯವರೂ "ಎಲ್ಲವೂ ಸರ್. ಕ್ರಿಪ್ಸ್‌ರು ನಮ್ಮ ಮುಂದಿಡುವ ಅಂಶಗಳ ಮೇಲೆ ಹೊಂದಿಕೊಂಡಿದೆ" ಎಂದಿಷ್ಟೇ ಅಂದಿದ್ದಾರೆ. ಆದರೆ ಸರ್. ಕ್ರಿಪ್ಸ್‌ರು ತರುವ ಆ ಸೂಚನೆಗಳಿಗೆ ಭಾರತ ನಾಯಕರ ಒಪ್ಪಿಗೆ ಬೇಕೆಂದಿರುವುದರಿಂದ, ಭಾರತ ನಾಯಕರು ಒಪ್ಪಲಾರದ ಸೂಚನೆಗಳೂ ಅದರಲ್ಲಿ ಇರಬಹುದೇ ಎಂಬ ಸಂದೇಹ ಬರುತ್ತಿದೆ. ಹೇಗೂ ಪುಣ್ಯಕಾಲ ಸಂಕಲ್ಪ ಪ್ರಾರಂಭವಾಗುವಷ್ಟರಲ್ಲೇ ಮುಗಿಯದಿದ್ದರೆ ಸಾಕು.

ಒಂದು ವೇಳೆ, ಕ್ರಿಪ್ಸ್‌ರು ತರುವ ಸೂಚನೆಗಳು ಬಹು ಜನಸಮ್ಮತವಾದರೆ, ಭಾರತದ ಕುರುಕ್ಷೇತ್ರದ ಕಾರ್ಯಗಳು ಸುಗಮವಾಗುವುದರಲ್ಲಿ ಸಂದೇಹವಿಲ್ಲ. ಇದು ಜಪಾನರ ಅದೃಷ್ಟ ಪರೀಕ್ಷೆಯ ಕಾಲವೆನ್ನುವುದಾದರೆ ಭಾರತದ ಅದೃಷ್ಟ ಪರೀಕ್ಷೆಯ ಸಮಯವೂ ಇದೇ ಎನ್ನಬಹುದು

ಆಸ್ಟ್ರೇಲಿಯಕ್ಕೆ ಯುದ್ಧಭೀತಿ

"ಜಪಾನೀಯರು ಆಸ್ಟ್ರೇಲಿಯವನ್ನೂ ಭಾರತವನ್ನೂ ಏಕಕಾಲದಲ್ಲಿ ಆಕ್ರಮಿಸುವಷ್ಟು ಶಕ್ತರು" ಎಂದು ಕೆಲವರ ಮತ; "ಎರಡು ವಾರಗಳಲ್ಲಿ ಜಪಾನರು ಆಸ್ಟ್ರೇಲಿಯವನ್ನು ಬಲವಾಗಿ ಆಕ್ರಮಿಸುವರು; ಅವರು ಬ್ರಿಸ್ಬೇನ್, ಸಿಡ್ನಿ ಮತ್ತು ಮಲ್ಬೋರ್ನುಗಳ ಮೇಲೆ ಜೋರಾಗಿ ಬಾಂಬು ಹಾಕುವರು" ಎಂದು ಇನ್ನು ಕೆಲವರ ಮತ. ಏನಂಜ ಆಸ್ಟ್ರೇಲಿಯದ ಮೇಲಿನ ವಿಪತ್ತಿನ ಭೀತಿ ಹೆಚ್ಚುತ್ತಿದೆ ಎಂಬುದು ನಿರ್ವಿವಾದ. "ಆಸ್ಟ್ರೇಲಿಯವು ಎಂಥ ದುಷ್ಪರಿಣಾಮಕ್ಕೂ ತಯಾರಾಗಬೇಕು" ಎಂದು ಡಚ್ ಈಸ್ಟ್ ಇಂಡೀಸಿನ ಲೆ॥ ಗವರ್ನರ್ ಜನರಲರಾದ ಡಾ। ವಾನ್ ಮೂಕರವರೂ ಸಾರಿರುತ್ತಾರೆ.


೫೦೧ ಸ್ಪೆಷಲ್ ಸಾಬೂನು
ನಿಮ್ಮ ಒಗೆಯುವ ತೊಂದರೆಗಳನ್ನು
ನಿವಾರಣೆ ಮಾಡುವುದು.
501
SPECIAL
HOUSEHOLD SOAP
SPECIALLY MADE FOR WASHING DELICATE MATERIALS
ಒಗೆದ ಬಟ್ಟೆಗಳು, ಅರ್ಧ ಬಿಳುಪಾದವೆಂತಾಗಲಿ, ಶರಟುಗಳು, ಸೀರೆಗಳು, ಕೆಟ್ಟುಹೋದವೆಂತಾಗಲೀ, ಚಿಂತಿಸಬೇಕಾಗಿಲ್ಲ. ೫೦೧ ಸ್ಪೆಷಲ್ ಸಾಬೂನಿಗೆ ಬದಲಾಯಿಸಿ ನಿಮ್ಮ ತೊಂದರೆಗಳನ್ನು ಮಟ್ಟೆತು ಬಿಡಿ. ಈ ದಿನವೇ ಒಂದು ಪೆಟ್ಟಿಗೆಯನ್ನು ಕೊಂಡುನೋಡಿ.
ಟಾಮ್ಕೊ ಸೇಲ್ಸ್ ಡಿಪಾರ್ಟ್‌ಮೆಂಟ್, 2 A. ಸಾತ್ ಸೆರೇಡ್, ಬೆಂಗಳೂರು.
ದಿ ತಾತಾ ಆಯಿಲ್ ಮಿಲ್ಸ್ ಕಂಪೆನಿ ಲಿ., ತಾತಾಪುರಂ ಮತ್ತು ಬೊಂಬಾಯಿ.
೫೦೧ ಸ್ಪೆಷಲ್ ಅಲ್ಲದೆ ಹೆಸರುವಾಸಿ
೫೦೧ ವಾಷಿಂಗ್ ಸೋಪ್ ಸಹ ಉ
ಇದಕ್ಕೆ ಬೆಲೆ ಕಡಿಮೆ. ಇದು
ಗಳಿಗೆಲ್ಲಾ ಅತಂತ್ಯ ಸಹಕಾರಿ.
ಗಳು, ಬಾರ್‌ಗಳು, ಬಿಲ್ಲೆಗಳ
ದಲ್ಲಿಯೂ ಮತ್ತು ಸಣ್ಣ ಸಣ್ಣ ಚೂರುಗಳಾ
ಗಿಯೂ ಎಲ್ಲಾ ಉತ್ತಮ ಅಂಡಿಗ
ದೊರಕುವುದು. ೫೦೧ ಸ್ಪೆಷಲ್
ಪ್ಯಾಕೆಟ್‌ಗಳಲ್ಲಿ ದೊರಕುತ್ತದೆ.
ಪ್ರಾಣಿಗಳ ಕೊಬ್ಬು ಮಿಶ್ರವಾಗಿಲ್ಲ

ಜಪಾನರು ಸೈಬೀರಿಯದ ಮೇಲೆ ಬೀಳುವರೆ?

—ಹಾಗೆಂದು ಇಂದು ವಾರ್ತೆ ಈಗ ಎದ್ದು ಕುಣಿಯುತ್ತಿದೆ. ಅದು ಹಿಟ್ಲರಿನ ಸಹಾಯಕ್ಕಾಗಿ! ವಸ್ತುತಃ ಈ ಬೇಸಿಗೆಯಲ್ಲಿ ಅಥವಾ ಮುಂದಿನ ಚಳಿಗಾಲದೊಳಗೆ ಹಿಟ್ಲರ್ ರಷ್ಯವನ್ನು ತೀರಿಸಿಬಿಡದಿದ್ದರೆ, ಮುಂದೆ ರಷ್ಯವನ್ನು ಗೆದ್ದೇನೆಂಬ ಆಸೆ ಅವನಿಗಿಲ್ಲ. ಹಾಗಾಗಿ ಜಪಾನೂ ರಷ್ಯದ ಮೇಲೆ ಬೀಳುವ ಸಂಭವವಿದೆ ಎಂದು ಬೊಬ್ಬೆ. ಆದರೆ ಜಪಾನರು ಹಾಗೆ ಮಾಡಿಯಾರೇ ಎಂಬ ಸಂದೇಹ ಹಲವರಿಗಿನ್ನೂ ಇದ್ದೇ ಇದೆ. ಅದಕ್ಕೆ ಕಾರಣಗಳೂ ಇಲ್ಲದಿಲ್ಲ. ಜಪಾನರು ಏಕಕಾಲದಲ್ಲಿ ಎಷ್ಟು ರಂಗಗಳಲ್ಲಿ ಕಾದಬಹುದು? ಅತ್ತ ಆಸ್ಟ್ರೇಲಿಯಾ ಇತ್ತ ಬರ್ಮ, ಒಂದು ವೇಳೆ ಇಂಡಿಯಾ; ಮತ್ತೆ ನಡುವಿನಲ್ಲಿ ಚೀನಾ; ಇಷ್ಟರ ಮೇಲೆ ರಷ್ಯವೇ? ಪೆಸಿಫಿಕ್ಕಿನ ಕಾದಾಟ ವಾರಂಭವಾದಂದಿನಿಂದ, ಜಪಾನರಿಗೆ ಚೀನದಲ್ಲಿ ಇಳಿಮುಖ. ಅನ್ನುವಾಗ ಆಸ್ಟ್ರೇಲಿಯಾ—ರಷ್ಯಗಳೆರಡರನ್ನೂ ಕಟ್ಟಿಕೊಂಡರೆ, ಮಿತ್ರರು ಆ ಸಂದರ್ಭವನ್ನು ಉಪಯೋಗಿಸಿಕೊಂಡು ಜಪಾನರ ಸೊಂಟ ಮುರಿಯಲು ನೋಡಬೇ? ಮೇಲಾಗಿ ರಷ್ಯದವರ ವ್ಲಾಡಿವೊಸ್ಟಾಕಿನಿಂದ ಸಮೀಪದ ಟೋಕಿಯೋವಿಗೆ ವಿಶೇಷ ಭೀತಿ ಇರುವುದರಿಂದ, ಜಪಾನರು ಸೈಬೀರಿಯಕ್ಕೆ ನುಗ್ಗುವರೆಂಬುದು ಭೀತಿಪಡಿಸಲಿಕ್ಕೆ ಹುಟ್ಟಿಸಿದ ಹುಟಾರಾಗಿದ್ದರೂ ಇರಬಹುದೆಂದು ಕೆಲವರ ಹೂಹೆ.

ಇಂಗ ಸ್ಪೆಷಲ್ ಸಾಬೂನು ಬಟ್ಟೆಗಳನ್ನು ಚೊಕ್ಕವಾಗಿ ಒಗೆಯುವುದಲ್ಲದೆ ಬಟ್ಟೆಗಳು ಅಕಾಲ ಬಳಕೆ ಬರುವಂತೆ ಮಾಡುತ್ತದೆ
ಇಂಗ ಸ್ಪೆಷಲ್ ಸಾಬೂನು ಅತ್ಯಂತ ನಾಜೂಕಾದ ವಸ್ತ್ರಗಳಿಗೆ ಯಾವ ಹಾನಿಯನ್ನು ಮಾಡುವುದಿಲ್ಲ
ಇನ್ನು ಇಂಗ ಸ್ಪೆಷಲ್ ಸಾಬೂನನ್ನೆ ಉಪಯೋಗಿಸುತ್ತೇನೆ. ಇದರ ಉಪಯೋಗದಿಂದ ಮನೆಯಲ್ಲ ಬಟ್ಟೆಗಳನ್ನು ಒಗೆಯುವುದು ಸುಲಭ

ಬೇಜಿನಿನ ಕಡೆಗೆ ಜಪಾನರ ನಡೆ

ಜಪಾನರೀಗ ಬೇಜಿನಿನ ಕಡೆ ಮುಂಬರಿಯುವಂತೆ ತೋರುತ್ತಿದೆ. ಅದು ರಂಗೂನಿನಿಂದ ೯೦ ಮೈಲುಗಳ ದೂರದಲ್ಲಿದೆ. ಮೇಂಡಲೆ ಮತ್ತು ಬರ್ಮಾ ರೋಡುಗಳಿಗೆ ನೇರವಾದ ರೈಲ್ ಮತ್ತು ರಸ್ತೆಗಳ ಸಂಪರ್ಕವುಳ್ಳ, ಮಿತ್ರರ ಕೈಯಲ್ಲಿ ಉಳಿದಿರುವ ಬರ್ಮದ ಕೊನೆಯ ಬಂದರವೆಂದರೆ ಅದೇ. ಅದರ ಗತಿ ಏನಾಗುವುದೆಂಬುದು ಮುಂದಿನ ಮಾತು.

ಸರಬರಾಯಿ ಶಾಖೆಯ ಕೆಲಸ ಕಾರ್ಯ

(೧ನೇ ಪುಟದಿಂದ ಮುಂದುವರಿದುದು)

ಮೂಲಕ ಸಾಮಗ್ರಿಗಳನ್ನು ಪಡೆಯುವಂತಾಗಬೇಕೆಂದು ಸರಕಾರದ ಅಭಿಮತ. ಗುಡಿಕೈಗಾರಿಕೆಗಳೀಗ ವ್ಯವಸ್ಥೆಗೊಂಡಿಲ್ಲ; ಅವು ಅಗ್ಗವಾಗಿಯೂ ಇಲ್ಲ. ಆದರೂ ಸರಕಾರವು, ಸರಬರಾಯಿ ಶಾಖೆಗೆ ಬೇಕಾದ ಪದಾರ್ಥಗಳು ಯಾವುವೆಂದು ಪ್ರತಿ ಪ್ರಾಂತಿಕ ಸರಕಾರಕ್ಕೂ ಪಟ್ಟಿ ಕೊಟ್ಟಿದೆ" ಎಂದರು.

ಮಿ। ಜೆಂಕಿನ್ಸ್‌ರವರು ಎಡ್ಜ್‌ಮೈಜರ್ ಮೊದಲಾದವರನ್ನು ನೇಮಿಸುವ ಈಗಿನ ಪದ್ಧತಿಯೇ ಸರಿಯಾದುದೆಂದು ಸಮರ್ಥಿಸಿದರು. ಈ ರೀತಿಯ ನೇಮಕದಿಂದ ಆ ಸಿಬಂದಿಯವರು, ಅಧಿಕಾರದ ದುರುಪಯೋಗ ಮಾಡುವರೆಂಬ ಆರೋಪಗಳೆಲ್ಲ ಬುಡವಿಲ್ಲದುದು ಎಂದರು.

"ಈಗ ಸರಬರಾಯಿ ಶಾಖೆಗೆ ಸೇನೆಯ ಮುಂದಿಯನ್ನು "ರಿಕ್ರೂಟ್" ಮಾಡುವುದಿಲ್ಲ; ಆದರೆ ಕೆಲವೊಂದು ವ್ಯಕ್ತಿಗಳ ಹಕ್ಕಿನ ರಕ್ಷಣೆಗಾಗಿ ಈ ಶಾಖೆಯಲ್ಲಿ ಕೆಲವು ಸೇನಾಶಾಖೆಯ ಮುಂದಿಯನ್ನು ಇಟ್ಟುಕೊಳ್ಳಬೇಕಾಗಿ ಬಂದಿದೆ. ಮತ್ತೆ ಈ ಶಾಖೆಯವರ "ಲಂಚಸಂಗಳ ವಿಚಾರವು ನಮ್ಮೆಲ್ಲರ ಗಂತೆಯ ವಿಷಯವಾಗಿಯೇ ಉ
ಈ ಚರ್ಚಾ ಕಾಲದಲ್ಲಿ ಎದುರಿಗೆ
ಆ ವಿಚಾರಗಳಲ್ಲಿ ಹೊಸದೇನೂ ಇಲ್ಲ. ಈ ಶಾಖೆಯಲ್ಲಿ ಲಂಚಸಂಚಗಳ ಕಾಟವಿದೆ ಎಂಬುದನ್ನು ನಾನೂ ಒಪ್ಪುತ್ತೇನೆ. ಆದರೆ ಯುದ್ಧದ ಪರಿಸ್ಥಿತಿಯ ಸಮಯದಲ್ಲಿ ಮುಖ್ಯವಾಗಿ ಸರಕಾರದೊಡನೆ ಜನತೆ ಸಹಕರಿಸದಿರುವಾಗ ಆ ಕೆಡುಕನ್ನು ನಿರ್ಮೂಲಿಸಲು ಅಸಾಧ್ಯ. ಈ ಕೆಡುಕಿನ ನಿರ್ಮೂಲಕಾರ್ಯದಲ್ಲಿ ಅಖಂಡವಾದ ಜನತಾ ಅಭಿಪ್ರಾಯದ ಬೆಂಬಲ ಬೇಕಾಗಿದೆ" ಎಂದರು.

ತಿಂಗಳಿಗೆ
ಸುಲಭವಾಗಿ ರೂ. 50 ರಿಂದ
ರೂ. 75ರ ತನಕ ಸಂಪಾದಿಸಿಕೊಳ್ಳಿ

ನಮಗಾಗಿ, ಉಪಯೋಗಿಸಲ್ಪಟ್ಟ ಹಿಂದೂ ಸ್ಥಾನದ ಅಂಚೆ ಚೀಟುಗಳನ್ನು ಸಂಗ್ರಹಿಸಿರಿ. ನಾವು ಕೊಂಡುಕೊಳ್ಳುವ ದರದ ಪಟ್ಟಿಯನ್ನು ಗ್ರಾಹಕರಿಗೆ ಕಳುಹಿಸುತ್ತೇವೆ. 12 ಆಣೆ ಮತ್ತು 14 ಆಣೆ ಬೆಲೆಯ 6ನೇ ಜೋರ್ಜ್ ಪ್ರಭುಗಳು ಹೊರಡಿಸಿದ ವಿಮಾನ ಚಿತ್ರಾಂಕಿತ ಉಪಯೋಗಿಸಲ್ಪಟ್ಟ ಅಂಚೆ ಚೀಟುಗಳನ್ನು ನೂರಕ್ಕೆ ರೂ 3-2-0ರಂತೆ ಕೊಂಡುಕೊಂಡಿದ್ದೇವೆ. ಹಿಂದೂ ಸ್ಥಾನದ ಉಪಯೋಗಿಸಲ್ಪಟ್ಟ ಅಂಚೆ ಚೀಟುಗಳನ್ನು ನೀವು ಬೇಂಕು ಅಥವಾ ವ್ಯಾಪಾರಿಕ ಸಂಸ್ಥೆಗಳ ಜವಾನರಿಂದ ಸುಲಭವಾಗಿ ಸಾವಿರಕ್ಕೆ 4 ಆಣೆ ಅಥವಾ 5 ಆಣೆಯಂತೆ ಕೊಳ್ಳಬಹುದು. ವ್ಯವಹಾರವು ಇಂಗ್ಲಿಷ್, ಹಿಂದಿ ಅಥವಾ ಉರ್ದು ಭಾಷೆಯಲ್ಲಿ ಮಾತ್ರ.

The Punjab Philatelic Co.,
(ESTD. 1899.)
Ramkrishna Road,
JULLUNDUR CITY, (Punjab)

ನಮ್ಮ ಶ್ವಾಸಕ್ಕೆ
ವ್ಯಾಪಮೆ ಇದ್ದರೆ ನೀವು
ಔಷಧವನ್ನು
ತಾರಿರಿ

ನಮ್ಮ ಯಕೃತ್ತಿನಿಂದ ಎರಡು
ದ್ರ ಕರುಳೊಳಗೆ ಸರಿಯ
ಳು ಸ್ಪಷ್ಟವಾಗಿ, ಮಲ
ದೆ ಮತ್ತು ನಮ್ಮ ಆಹಾ
ರಾಗಿ ನಮ್ಮ 28 ಫೀಟಿನ
ಾಗುತ್ತದೆ. ಈ ಹೊಲಸು
ಗಳಿಗೊಮ್ಮೆ ನಮ್ಮ ದೇಹದ
ಕ್ಕೆ ಸುತ್ತದೆ. ಅದು
ಯೂ, ಜಡಸ್ವಭಾ
ಕ್ಕೂ ಬಾರದವರ
ನಮ್ಮ ಮಿತ್ರರು ಈ
ುಂದ ಹೊರಡುವ
ಅದನ್ನು ದುರ್ವಾಸನಾ
ಸವೆನ್ನುತ್ತಾರೆ. ಭೇದಿಯ
ುಕ್ಕಳಿಸುವ ಇತರ ಔಷಧ
ಮಾತ್ರ ಸಹಾಯ ಮಾಡು
ಶಚಿಕ್ಕ ಲಿವರ್ ಮಾತ್ರೆಗಳನ್ನು
ಡು ಪೈಂಟ್ ಪಿತ್ತದ್ರವವು
ಏ. ಮಕ್ತಾಗ ನೀವು
ಹುಂಪುಗೊಂಡವರಾಗುತ್ತೀರಿ.
ಲಿವರ್ ಪಿಲ್ಸ್ ಎಂಬ ಹೆಸರಿ
ಮತ್ತು ನೀವು ಕೇಳಿದುದನ್ನೇ
41

2 ಬಿಲ್ಲೆಗಳನ್ನು ಅಥವಾ
10 ಬಿಂದುಗಳನ್ನು ಸೇವಿಸಿ

ಪುಷ್ಟ ನರಗಳಲ್ಲದೆ ನೀವು ದೇಹಾ
ಗ್ಯದಿಂದಿರಲಾರಿರಿ. ಪುಷ್ಟ ನರಗಳೇ
ಷ್ಟಯುಕ್ತ ಮನುಷ್ಯನಿಗೂ ಸದಾ
ತನಂತಿರುವವನಿಗೂ ಇರುವ
ಸವನ್ನು ಉಂಟುಮಾಡುವವು.
ಫೂಸ್ಫೆರಿನ್‌ನಲ್ಲಿರುವ ಅಮೂಲ್ಯ ಶಕ್ತಿಗೆ
ನರಗಳನ್ನು ಶೀಘ್ರ ಬಲವರ್ಧಿಸುವ ಗುಣ
ವಿದೆ. ನೀವು ಬಳಸಿ ಕಳಕೊಂಡ,—
ಬಲ, ಕ್ರಿಯಾಶಕ್ತಿ
ಮತ್ತು ಚೇತನ ಇವು
ಗಳನ್ನು ಅದು ಪುನಃ
ಒದಗಿಸಿ ಕೊಡುತ್ತದೆ.

PHOSFERINE
ಫೊಸ್ಫೆರಿನ್
ನರಗಳ ದೌರ್ಬಲ್ಯದಿಂದುಂಟಾಗುವ
ಯಾವತ್ತೂ ನಿಶ್ಯಕ್ತಿಗೆ
ಮ್ಹಾಲಕರು:—
ಫೊಸ್ಫೆರಿನ್ (ಆಶ್ಟನ್ & ಪಾರ್ನಸ್)ಲಿಮಿಟೆಡ್
ವಾಟ್‌ಫರ್ಡ್, ಇಂಗ್ಲಾಂಡ್.

THE CANARA BANKING CORPORATION, LTD.
(*Incorporated in British India with limited liability*)
will now receive
SEASON DEPOSITS
for a period of 4 months at 3% P. A.
at all its Branches.

ಕಂಠೀರವ
KANTEERAVA
KANARESE, BI-WEEKLY

ಈ ಯುಗಾದಿ ಶುಭದಾಯಕವಾಗಲಿ!—ಸೂಕ್ತಿಮಾಲೆ.

XXIII] ಮಂಗಳೂರು, ತಾರೀಕು ೧೭—೩—೧೯೪೩ [೧೦೦
೧೮೬೪ ಚಿತ್ರಭಾನು ಸಂವತ್ಸರದ ಚೈತ್ರ ಶು। ೧ ಮಂಗಳವಾರ

ಯುಗಾದಿ

ಇಂದು ಯುಗಾದಿ! ನೂತನ ವರ್ಷಾರಂಭ. "ಕಂಠೀರವ"ನೂ ಜನ್ಮವೆತ್ತಿದುದು ಯುಗಾದಿಯಲ್ಲೇ. ಆದುದರಿಂದ ಎಲ್ಲರಿಗೂ ಇದೊಂದು ಸಂತೋಷದ ದಿನ, ತಮ್ಮ ಸುಖ ಕಷ್ಟಗಳೇನಿದ್ದರೂ ಅವನ್ನು ಮರೆತು, ತಮ್ಮ ಪುತ್ರಕಳತ್ರರೊಂದಿಗೆ ಕಲೆತು ಹರ್ಷಿಸಬೇಕಾದ ಸುದಿವಸ ಎಂಬುದೇನೋ ನಿಜವಾದರೂ, ಈ ಯುಗಾದಿ ವಾಡಿಕೆಯಂತೆ ಅಂತಹ ಹರ್ಷವನ್ನು ಉಂಟುಮಾಡುವ ವರ್ಷಾದಿಯ ದಿನವಾಗಿಲ್ಲವೆಂಬುದು ಎಲ್ಲರ ಅನುಭವಕ್ಕೂ ಆಗಲೇ ಬಂದಿರುವ ವಿಷಯವಾಗಿದೆ.

ಆದೇಕೆ ಹಾಗೆ? ಇದನ್ನು ನಾವು ವಿಸ್ಮರಿಸಬೇಕಾಗಿಲ್ಲ! ಇದಕ್ಕೆ ಕಾರಣ—ಘೋರ ಯುದ್ಧವೆಂಬುದು ಸರ್ವಶ್ರುತವಾಗಿದೆ. ಎಲ್ಲಿ ನೋಡಿದರೂ, ಘೋರ ಯುದ್ಧದ ಮಾತೇ; ಅದರ ಚಿಂತೆಯೇ. ಅದರಲ್ಲಿಯೂ ಗತವರ್ಷದಲ್ಲಿ ಇಂಡಿಯಕ್ಕೆ ಬಹು ದೂರವಿದ್ದ ಆ ಯುದ್ಧವು, ಈ ವರ್ಷ ನಮ್ಮ ದೇಶದ ಹೆಬ್ಬಾಗಿಲಿನ ಸಮೀಪಕ್ಕೆ ಬಂದು, ಶತ್ರುವು ಇನ್ನೇನು ಈ ಕ್ಷಣದಲ್ಲಿಯೋ ಮರುಕ್ಷಣದಲ್ಲಿಯೋ ನಮ್ಮ ಮೈ ಮೇಲೆ ಬೀಳಬಹುದೆಂಬಷ್ಟು ಚಿಂತಾಜನಕ ಪರಿಸ್ಥಿತಿಯುಂಟಾಗಿರುವುದರಿಂದ, ನಮ್ಮ ಜೀವನದಲ್ಲಿ ಇಷ್ಟೊಂದು ಕಾತರತೆಯ, ವ್ಯಥೆಯ, ಚಿಂತಾಭೀತಿಗಳ ಬಂದು ಯುಗಾದಿ ಹಿಂದೆಂದೂ ಬಂದಿಲ್ಲವೆಂದರೆ ಅತ್ಯುಕ್ತಿಯಲ್ಲ.

ಆ ಯುಗಾದಿಯಿಂದ ಈ ಯುಗಾದಿಯ ವರೆಗಿನ ಒಂದು ವರ್ಷದ ಕಾಲದಲ್ಲಿ ನಡೆದ ಯುದ್ಧಕಾರ್ಯಗಳು, ಅದರ ಪರಿಣಾಮಗಳು ಏನೆಂಬುದನ್ನು ನಾವು ಆಗಾಗ ತಿಳಿಸುತ್ತ ಬಂದಿದ್ದೇವೆ. ಅವು ಈಗ ತಿರುಗಿ ನೆನಪಿಗೆ ತಂದುಕೊಡಬೇಕಾದಷ್ಟು ಹಳೆತಾಗಿಲ್ಲ. ಮುಖ್ಯವಾಗಿ ಏಕ್ಸಿಸಿನ ಬಲಗೈಯಾದ ಜಪಾನಿನ ಯುದ್ಧ ಪ್ರವೇಶದಿಂದ ಉಂಟಾದ, ಉಂಟಾಗುತ್ತಿರುವ ಆ ಪರಿಣಾಮಗಳು, ತಾತ್ಕಾಲಿಕವಾಗಿಯೇ ಆದರೂ, ಇಂದಿನ ಯುಗಾದಿಯಲ್ಲಿ, ಭಾರತವನ್ನು "ಬಿರುಗಾಳಿಗೆ ಗುರಿಯಾದ ಒಂದು ನೌಕೆ"ಯ ಅವಸ್ಥೆಗೇ ತಂದಿಟ್ಟಿವೆ ಎಂಬುದು ನಿರ್ವಿವಾದ.

ಆದರೂ ಭಾರತೀಯರನ್ನು ಹುರಿದುಂಬಿಸುವ ಕೆಲವೊಂದು ಮುಖ್ಯಾಂಶಗಳ ನ್ನಾದರೂ, ನಾವು ಇಂದಿನ ಯುಗಾದಿಯಲ್ಲಿ ಕಾಣದೆ ಇಲ್ಲ. ಅಮೂಲ್ಯವಾದ ಸಿಂಗಪುರ, ರಂಗೂನುಗಳು ನಮ್ಮ ಕೈತಪ್ಪಿದರೂ, ಇನ್ನೂ ಮಿತ್ರರಿಗೆ ಹಲವೊಂದು ದುರಾದೃಷ್ಟದ ಘಟನೆಗಳುಂಟಾದರೂ, ಮಾರ್ಶಲ್ ಚಾಂಗ್ ಕೈಷೇಕರ ಹಿಂದೂದೇಶದ ಸಂದರ್ಶನ, ರಷ್ಯದ ಚೀನದ ವಿಜಯೆಸಿದ್ಧಿ, ಅಮೆರಿಕದವರ ಯುದ್ಧ ಸಹಾಯ, ಬ್ರಿಟಿಷರ ಧೃಡಸಂಕಲ್ಪ, ಏಕ್ಸಿಸ್ ರಾಷ್ಟ್ರಗಳ ಅನಿಶ್ಚಿತ ಕಾರ್ಯಕ್ರಮ ಇವು ನೆನಪಿಡತಕ್ಕ ದೊಡ್ಡ ಸಂಗತಿಗಳಾಗಿವೆ. ಮುಖ್ಯವಾಗಿ, ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರು ಹಿಂದೂದೇಶದ ರಾಜಕೀಯ ಕಗ್ಗಂಟನ್ನು ಬಿಡಿಸುವ ರಾಯಭಾರಿಗಳಾಗಿ, ಇತ್ತ ದಯೆ ಮಾಡಿಸಲಿರುವುದು, ಮುಂದಿನ ಏದ್ಯಮಾನಗಳ ಶುಭಸೂಚನೆಯಾಗಿದೆ. ಈ ಸಂದರ್ಭದಲ್ಲಿ ಈ ಸಂವತ್ಸರದ ಶುಭಫಲವಾಗಿ, ಅವರು ತಮ್ಮ ರಾಯಭಾರದಲ್ಲಿ ಕೃತಾರ್ಥರಾಗಲೆಂದೂ, ಭಾರತವು ಒಂದುಗೂಡಿ ಶತ್ರುಗಳನ್ನು ಎದುರಿಸಿ, ಹಾಗೆ ಅವರನ್ನು ಸೋಲಿಸುವ ಕಾರ್ಯದಲ್ಲಿ ಜಯಲಾಭ ಪಡೆಯಲೆಂದೂ ಹಾರೈಸಿ, ಆ ಹಾರೈಕೆಯ ಪೂರೈಕೆಗಾಗಿ, ಇಂದು ಈ ಯುಗಾದಿಯಂದು, ಪರಮಾತ್ಮನಲ್ಲಿ ಅನನ್ಯಭಕ್ತಿಯಿಂದ, ನಾವೆಲ್ಲರೂ ಸೇರಿ, ಏಕ ಕಂಠದಿಂದ ಪ್ರಾರ್ಥಿಸೋಣ!

ಮಂಗಳೂರು

ಜಿ॥ ಕಲೆಕ್ಟರರವರ ಅಧ್ಯಕ್ಷತೆಯಲ್ಲಿ ಮುನ್ಸಿಪಲ್ ಮುಹಮ್ಮಡನ್ ಹಾ॥ ಎ॥ ಶಾಲಾ ವರ್ಧಂತಿ

ಕಳೆದ ತಾ. ೧೪ನೇ ಶನಿವಾರ ಸಂಜೆ ಮೇಲ್ಕಂಡ ಶಾಲಾ ವರ್ಧಂತಿಯುತ್ಸವವು ಆ ಶಾಲಾ ವಠಾರದಲ್ಲಿ ನಮ್ಮ ಜಿಲ್ಲಾ ಕಲೆಕ್ಟರ ಮಿ. ಜೆ. ಟಿ. ಕರಮತುಲ್ಲ ಐ. ಸಿ. ಎಸ್. ಅವರ ಅಧ್ಯಕ್ಷತೆಯಲ್ಲಿ ಬಹಳ ಸಂಭ್ರಮದಿಂದ ಜರುಗಿತು. ಅಧ್ಯಕ್ಷರನ್ನು ಹೂಮಾಲೆಯಿಂದ-ಅಲಂಕರಿಸಿ, ಪ್ರಾರ್ಥನೆ ಸ್ವಾಗತಗೀತಗಳಾದ ಬಳಿಕ, ಶಾಲಾ ಶ್ರೇಯಃಪ್ರಾರ್ಥನೆಯನ್ನು ಜನಾಬ್ ಮಹಮ್ಮದ್ ಅಬ್ಬಾ ಸಾಹೇಬ್ ಅವರು (ಶಾಲೆಯ ಹಳೇ ವಿದ್ಯಾರ್ಥಿ) ಉರ್ದು ಭಾಷೆಯಲ್ಲಿ ಮಾಡಿದರು. ಶಾಲಾ ಹೆಡ್‌ಮಾಸ್ಟರ್ ಮಿ. ಕೆ. ಮಹಮ್ಮದರವರು ಶಾಲಾ ವರದಿಯನ್ನೋದುತ್ತ, ಈ ಶಾಲೆಯ ಶಿಕ್ಷಣದ ಮಾಧ್ಯಮವು ಉರ್ದುವೆಂದೂ, ಇಲ್ಲಿ ಪಾಸಾದ ಹಲವು ವಿದ್ಯಾರ್ಥಿಗಳು ಹೈಸ್ಕೂಲಿನ ಉಚ್ಚ ತರಗತಿಗಳಲ್ಲಿ ಸೇರಿ ಕೃತಾರ್ಥರಾಗಿರುವರೆಂದೂ, ಈಗಿನ ವಿದ್ಯಾರ್ಥಿಗಳ ಸಂಖ್ಯೆ, ಶಾಲೆಯ ನಾನಾ ಸಂಘ, ಚಟುವಟಿಕೆಗಳ ಕುರಿತು ತಿಳಿಯಪಡಿಸಿದರು. ಅಧ್ಯಕ್ಷರು ಬಹುಮಾನ ವಿತರಣ ಮಾಡಿ ತಮ್ಮ ಭಾಷಣದಲ್ಲಿ, ಮುಸಲ್ಮಾನರು ರಣಶೂರ ಜನರೆಂಬುದನ್ನು ಸಮರ್ಥಿಸುತ್ತ, ಚಿಲ್ಲರ್ಟೆ ವಿಷಯಗಳಿಗಾಗಿ ಮುಸ್ಲಿಮರು ಹೋರಾಡದೆ, ಸಮೀಪವಿರುವ ಶತ್ರುವಿನೊಡನೆ ಜನಬಲ ಧನಬಲಗಳೊಡನೆ ಹೋರಾಡಲು ಸಿದ್ಧರಾಗಿರಬೇಕೆಂದೂ, ವ್ಯವಹಾರದಲ್ಲಿ ಉರ್ದು—ಕನ್ನಡವನ್ನೇ ಬಳಸಬೇಕೆಂದೂ ಅಸ್ಖಲಿತವಾದ ಉರ್ದು ಭಾಷೆಯಲ್ಲಿ ಸ್ಫೂರ್ತಿದಾಯಕವಾಗಿ ನುಡಿದರು. ಮು॥ ಕೌನ್ಸಿಲರ್ ಮತ್ತು ಉತ್ಸವ ಕಮಿಟಿಯ ಅಧ್ಯಕ್ಷರಾದ ವಕೀಲ್ ಮಿ. ಏ. ಮುಸಬ್ಬರವರು ವಂದನಾರ್ಪಣೆ ನಡೆಸುತ್ತ ಜಿಲ್ಲಾ ಕಲೆಕ್ಟರರ ಜನ್ಮಸ್ಥಾನವು ಮಂಗಳೂರೆಂದು ತಿಳಿಸಿ ತನ್ಮೂಲಕ ಅವರನ್ನು ಇಂದಿನ ಅಧ್ಯಕ್ಷ ಸ್ಥಾನಕ್ಕೆ ಪ್ರಾರ್ಥಿಸಲು ತಮಗಿರುವ ಒಂದು ವಿಶೇಷ ಹಕ್ಕಿನ ಕುರಿತಾಗಿ ಸೂಚಿಸಿದರು. ಕೊನೆಗೆ ವಿದ್ಯಾರ್ಥಿಗಳ ವಿವಿಧ ವಿನೋದಾವಳಿಗಳೂ ಇದ್ದುವು.

ಹಿಂದುಸ್ಥಾನ ಸ್ಕೌಟ್ ಎಸೋಸಿಯೇಶನ್

ಈ ಎಸೋಸಿಯೇಶನಿನ ಒಂದು ಮೀಟಿಂಗ್ ಕಳೆದ ಆದಿತ್ಯವಾರ ಬೆಳಿಗ್ಗೆ ಸ್ಥಳೀಯ ಥಿಯಸಾಫಿಕಲ್ ಲಾಜಿನಲ್ಲಿ ಶ್ರೀ. ಕೆ. ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಜರುಗಿ, ರಚನಾ ನಿಯಮಗಳ ಸಂಬಂಧದ ಕೆಲವು ತಿದ್ದುಪಡಿಗಳ ಕುರಿತು ಪ್ರಾಂತಿಕ ಹೆಡ್ ಕ್ವಾರ್ಟರ್ಸಿಗೆ ಬರೆದುಕೊಳ್ಳುವಂತೆ ಸೂಚಿಸಲಾಯಿತು. ಕಬ್ ಮಾಸ್ಟರ್, ಸ್ಕೌಟ್ ಮಾಸ್ಟರ್, ರೋವರ್ ಲೀಡರ್ ಇವರ ತರಬೇತಿ ಕೇಂದ್ರಗಳನ್ನು ಜಿಲ್ಲೆಯ ಕೆಲವೆಡೆಗಳಲ್ಲಿ ಬರುವ ಎಪ್ರಿಲ್—ಮೇ ತಿಂಗಳಲ್ಲಿ ನಡೆಸಬೇಕೆಂದು ನಿರ್ಧರಿಸಲ್ಪಟ್ಟಿತು.

ಕೊನೆಯಚ್ಚು

ಡಾನ್ ರಣರಂಗದಲ್ಲಿ ರಷ್ಯದವರು ಹೆಚ್ಚಿನ ಯುದ್ಧ ಸಾಮಗ್ರಿಗಳನ್ನು ಹಿಡಿದು, ಸೊಮ್ಲೆನಸ್ಕ್ ಪ್ರಾಂತದಲ್ಲಿ ಇನ್ನೂ ಕೆಲವು ಪ್ರದೇಶಗಳನ್ನು ಆಕ್ರಮಿಸಿರುವರ್. ಸರ್ ಎಸ್. ಕ್ರಿಪ್ಸ್ ರವರು ಇಂಡಿಯಕ್ಕೆ ಹೊರಟಿದ್ದಾರೆ; ಜಪಾನರು ಭಾರತದ ಮೇಲೆ ಸದ್ಯ ದಾಳಿ ಇಡಲಾರರೆಂದು ಹೇಳಲಾಗಿದೆ.

ಯುದ್ಧ ನಿಧಿಗಾಗಿ ಜೋಡಾಟ—ಬಜ್ಪೆ

ಶ್ರೀ ಕಟೀಲ್—ಮುಲ್ಕಿ ಮೇಳಗಳ ಜೋಡಾಟ ಕಳೆದ ಶನಿ, ಭಾನುವಾರಗಳಲ್ಲಿ ನಡೆದಾಗ ನಮ್ಮ ಡೆ॥ ಕಲೆಕ್ಟರ್ ಶ್ರೀ. ಬಿ. ಜೂಗಪ್ಪನವರು, ಮೊದಲ ದಿನ, ಯುದ್ಧ ಪರಿಸ್ಥಿತಿಯ ವಿಚಾರದಲ್ಲಿ ಭಾಷಣ ಮಾಡಿ ಸಹಾಯ ಕೋರಿದರು, ಎರಡು ದಿನಗಳಲ್ಲಿಯೂ ವಿದ್ಯಾರ್ಥಿಗಳಿಂದ ಸಮಯೋಚಿತ ಗೀತಗಳನ್ನು ಹಾಡಿಸಿ ಶ್ರೀ. ಜೂಗಪ್ಪನವರು ಅವರಿಗೆ ಪುಸ್ತಕಗಳ ಒಹುಮಾನ ಹಂಚಿದರು

ಕೃಷ್ಣಪ್ಪ ಮೆಮೊರಿಯಲ್ ಬೆಡ್‌ಮಿಂಟನ್ ಪಂದ್ಯಾಟ

ಸ್ಥಳೀಯ ಒರಿಯಂಟಲ್ ಕ್ಲಬ್ಬಿನವರು ನಡೆಸಿದ ಈ ಪಂದ್ಯಾಟದಲ್ಲಿ ಪೆಂಟ್ ಲ್ಯಾಂಡ್ ಪೇಟೆ ಟೀಮಿನವರು ಎಜಯಿಗಳಾದರು. ಶ್ರೀ. ಸೈಂಪಳ್ಳಿ ರಾಮರಾಯರು ಅಧ್ಯಕ್ಷತೆ ವಹಿಸಿ ಬಹುಮಾನಗಳನ್ನು ಹಂಚಿದರು.

ಚೀನಾ ವಿದ್ಯಾರ್ಥಿಗಳೂ, ಯುದ್ಧ ಕಾರ್ಯವೂ.

ಜಪಾನ್ ಚೀನದ ಮೇಲೆ ಆಕ್ರಮಿಸಿದ ಅಂದಿನಿಂದ, ಚೀನದ ಕಾಲೇಜು ವಿದ್ಯಾರ್ಥಿಗಳು ರಾಷ್ಟ್ರೀಯ ಯುದ್ಧ ಕಾರ್ಯಗಳಿಗಾಗಿ ಮಾಡುತ್ತಿರುವ ಸಹಾಯವು ಅಮೂಲ್ಯವಾಗಿದೆ. ಉಚ್ಚ ವಿದ್ಯಾಭ್ಯಾಸವು ಎಂದಿನಂತೆ ಸಾಗುತ್ತಿರುವಾಗ, ವಿಜ್ಞಾನ ವಿಚಾರಗಳಿಗೆ ಈಗ ಹೆಚ್ಚು ಗಮನವೀಯಲಾಗುತ್ತಿದೆ. ತತ್ತ್ವ ಜ್ಞಾನ, ರಾಜನೀತಿ, ಅರ್ಥಶಾಸ್ತ್ರಾದಿಗಳು ಪದ್ಧತಿಯ ಮೇರೆಗೆ, ವ್ಯಾಸಂಗಕ್ಕೊಳಗಾಗಿರುವಾಗ, ಹಲವು ವಿದ್ಯಾರ್ಥಿಗಳು ಹೊಸ ರೀತಿಯ ಯುದ್ಧೋಪಕರಣಗಳನ್ನು ಕಂಡು ಹಿಡಿಯಲು ಪ್ರಯತ್ನಿಸುತ್ತಿದ್ದಾರೆ.

ಯುದ್ಧಕ್ಕೆ ಮೊದಲು ಕಟ್ಟಡಗಳನ್ನೂ, ಸೇತುವೆಗಳನ್ನೂ ಕಟ್ಟಲು ಕಲಿಯುತ್ತಿದ್ದ ಇಂಜಿನಿಯರಿಂಗ್ ವಿದ್ಯಾರ್ಥಿಗಳೀಗ "ಪಿಲ್‌ಬಾಕ್ಸ್" ಡಾಟುವ ಸೇತುವೆ, ಬಾಂಬು ಪ್ರೂಫ್ ಆಶ್ರಯ ಸ್ಥಾನಗಳ ನಿರ್ಮಾಣವನ್ನು ಕಲಿಯುತ್ತಿದ್ದಾರೆ. ಮೆಕೆನಿಕಲ್ ಇಂಜಿನಿಯರು ಟ್ಯಾಂಕು, ಸಶಸ್ತ್ರ ಕಾರು, ವಿಮಾನಗಳ ದುರಸ್ತಿಯನ್ನು ಅಭ್ಯಸಿಸುತ್ತಿದ್ದಾರೆ. ವೈದ್ಯವಿಭಾಗದ ವಿದ್ಯಾರ್ಥಿಗಳು ಚೀನದ ಮೆಡಿಕಲ್ ಸರ್ವೀಸಿಗೆ ಸಹಾಯಕರಾಗಿರುವಂತೆ ವ್ಯಾಸಂಗನಡೆಸುತ್ತಿದ್ದಾರೆ. ಇಷ್ಟಾದರೂ ಚೀನ ವಿದ್ಯಾರ್ಥಿಗಳು ಕಾದಾಟದಲ್ಲಿ ಸೇರಲು ವಿಶೇಷ ಆಸ್ಪದವಿಲ್ಲ. ಚೀನದಲ್ಲಿನ ಇತರ ಮನುಷ್ಯಬಲ ಸಮೃದ್ಧವಾಗಿದೆ ಎಂಬುದೇ ಕಾರಣ.

ವಿದೇಶ—ಹಿಂದೂದೇಶ

ರಷ್ಯದವರ ಒತ್ತಾಟ

ರಷ್ಯದವರೀಗ ತಮ್ಮ ೪೦ ಡಿವಿಜನ್ ಸೇನೆಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಲೆನೆನ್‌ಗ್ರಾಡ್, ಡ್ನೀಜ ರಂಗಗಳಲ್ಲಿ ಭಾರೀ ಯುದ್ಧ; ಟಿಗ್ಗರಾಗ್‌ನಲ್ಲಿಯೂ ಹಾಗೇ.

ನೆಲ್ಲೂರಿಗೆ ಶಿಕ್ಷಾರ್ಥವಾಗಿ ಪೋಲೀಸ್ ಫೌಜು

ನೆಲ್ಲೂರು ನಗರದಲ್ಲಿ ಇದೇ ಮಾರ್ಚ್ ತಾ. ೧೦ರಿಂದ ಇನ್ನೊಂದು ವರ್ಷದ ಕಾಲ ಶಿಕ್ಷಾರ್ಥವಾದ ಪೋಲೀಸ್ ಫೌಜು ಇರಿಸಲ್ಪಟ್ಟು ಅದರ ಖರ್ಚನ್ನು ಅಲ್ಲಿನ ನಿವಾಸಿಗಳು ತರಬೇಕಾಗಿದೆ.

ವೈಸರಾಯರ ಸಂದೇಶ

"ಭಾರತೀಯರು ತಮ್ಮ ದೇಶದ ರಕ್ಷಣೆಗಾಗಿ ಯಾವತ್ತೂ ಪ್ರಯತ್ನಗಳನ್ನೂ ಮಾಡಬೇಕು; ಈ ದೇಶವೀಗ ವೈರಿಗಳ ಅಪಾಯ ಭೀತಿಗೆ ಗುರಿಯಾಗಿದೆ. ಪ್ರತಿಯೊಬ್ಬನೂ ಸೈನಿಕನಾಗಿ ದೇಶ ರಕ್ಷಣೆಯ ಕಾರ್ಯದಲ್ಲಿ ಸಹಕರಿಸಿ, ದೇಶದ್ರೋಹಿಯನ್ನು ನಿರ್ಮೂಲಿಸಿ, ವಿಜಯಸಿದ್ಧಿಯನ್ನು ಪಡೆಯಬಹುದು" ಎಂದು ಮುಂತಾಗಿ ವೈಸರಾಯರು ಭಾರತಕ್ಕೊಂದು ಸಂದೇಶ ಕಳುಹಿಸಿದ್ದಾರೆ.

ನಾನಾ ರಣರಂಗಗಳ ವಾರ್ತೆಗಳು

ರಷ್ಯದವರು ಮುನ್ನುಗ್ಗುತ್ತ ನಿಪ್ರೊಪಿಟ್ರೊವಸ್ಕಿನ ಬಳಿಗೆ ಬಂದಿದ್ದಾರೆ; ಕಿರೋವಿನಿಂದ ಜರ್ಮನ್ನರು ಓಡಿದ್ದಾರೆ; ಕೆರೆಬಿಯನ್ ಸಮುದ್ರದಲ್ಲಿ ಬ್ರಿಟನ್ ಮತ್ತು ಸ್ವೀಡನಿನ ಹಡಗುಗಳು ಮುಳುಗಿವೆ; ಆಸ್ಟ್ರೇಲಿಯಕ್ಕೆ ಅಮೆರಿಕದ ಸೇನೆಗಳು ಬಂದು ಮುಟ್ಟಿವೆ: ನ್ಯೂಗಿನಿಯಲ್ಲಿ ಜಪಾನರು ಹೊಸ ವಿಮಾನನಿಲ್ದಾಣಗಳನ್ನು ಕಟ್ಟುತ್ತಿದ್ದಾರೆ; ಜಪಾನಿ ನೌಕಾ ಬಲವು ಸಾಲಾವಮೌವಿನ ಬಳಿ ಇದೆ; ನ್ಯೂಗಿನಿ ಬಳಿ ಜಪಾನರ ಎಂಟು ಸರಬರಾಯಿ ಹಡಗುಗಳು ಮುಳುಗಿಸಲ್ಪಟ್ಟಂತೆ ಸುದ್ದಿ; ಮಡಗಾಸ್ಕರನ್ನು ತಾವಾಗಿ ಜರ್ಮನಿಗೆ ಒಪ್ಪಿಸಿ ಕೊಡುವುದಿಲ್ಲವೆಂದು ವಿಚಿಯವರ ಹೇಳಿಕೆ; ಸುಮಾತ್ರದ ರಾಜಧಾನಿ ಮಿಡಾನ್ ತಮ್ಮ ವಶವಾಯಿತೆಂದು ಜಪಾನರ ಮಾತು; ಬೊಂಬಯಿಯಿಂದ ಜನಗಳು ಹೊರಡುತಿದ್ದಾರೆ; ಸಿಲೋನಿನ ಜನಗಳು ಅಲ್ಲಿಂದ ಹೊರಡಬಹುದೆಂದು ಸರಕಾರದ ಅಪ್ಪಣೆ.

ಪೆಗುವಿನ ಉತ್ತರದಲ್ಲಿ ಯುದ್ಧ

ಪೆಗುವಿನ ಉತ್ತರದಲ್ಲಿ ಕಾಳಗವಾಗುತ್ತಿದೆ; ಚೀನಿ ಬಲಗಳು ಬ್ರಿಟಿಶ ರೊಡನೆ ಸೇರಿ ಯುದ್ಧ ಮಾಡುತ್ತಿವೆ.

ಜನರಲ್ ವೇವಿಲ್ಲರು

ಜನರಲ್ ವೇವಿಲ್ಲರು ಪ್ರೆಸ್ ಪ್ರತಿನಿಧಿಗಳಿಗೆ ಭೇಟಿ ಕೊಟ್ಟು ಇಂಡಿಯದ ರಕ್ಷಣಾಕಾರ್ಯ, ವಿಮಾನ ಬಲಗಳನ್ನು ಬಲಗೊಳಿಸುತ್ತಿರುವುದು, ಮಿತ್ರರು ಮಲಯಾ ಮೊದಲಾದ ಕಡೆ ಮಾಡಿದ ಪ್ರಮಾದಗಳು—ಇವೇ ಮೊದಲಾದುವುಗಳ ಕುರಿತು ಮಾತಾಡಿದರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ

ಇಂದು ವಾರ್ಧಾದಲ್ಲಿ ಈ ಕಮಿಟಿಯ ಮೀಟಿಂಗ್ ಜರುಗಲಿದೆ; ರಾಷ್ಟ್ರಪತಿಗಳು ಆಗಲೇ ದಯಮಾಡಿಸಿದ್ದಾರೆ.

ನೀವು ಮಿತವ್ಯಯ ಮಾಡಬೇಕಾದರೆ
ಮೊದಲು
ನಿಮ್ಮ ಹಣದ ಭದ್ರತೆಯನ್ನು ನೋ[illegible]

Safety first!



ವಾಚುಗಳನ್ನು ಕೊಳ್ಳುವಾಗ ಅವುಗಳ ಉದ್ದಿಶ್ಯಕ್ಕಿಂತಲೂ ಬೆಲೆಯು ಎರಿಷತವಿ ವಿಚಾರಯೋಗ್ಯವಲ್ಲ. ಯಾಕೆಂದರೆ ನಂಬಲಸಾಧ್ಯವಾದ ಸಮಯಸೂಚಿಗೆ ತೆತ್ತ ಬೆಲೆಯು, ಎಷ್ಟೇ ಆದರೂ ಅದು ಪೂರ್ಣ ನಷ್ಟವೇ. ವ್ಯಯವು ಅವಶ್ಯವಾದರೆ, ಎಷ್ಟೇಕೆಂದಿಂದ, ಕಡಿಮೆ ಬೆಲೆಗೆ ನಿಖರ ಕಾಲ ಸೂಚಿ ಎಂದು ಹೆಸರು ಪಡೆದ, ವೆಸ್ಟ್ ಎಂಡ್ "ಸೆಕುಂಡಸ್" ನಂಥ ಪ್ರಖ್ಯಾತ ವಾಚುಗಳನ್ನು ಕೊಳ್ಳಿರಿ. ಇವುಗಳಲ್ಲಿ ನಿಮ್ಮ ಹಣದ ಭದ್ರತೆಯೂ, ಉಪಯುಕ್ತತೆಯ ನಿಶ್ಚಯವೂ ಇವೆ. ನಿಮಗೆ ತಕ್ಕುದಾದ "ಸೆಕುಂಡಸ್" ಮಾದರಿಯನ್ನು ಸಚಿತ್ರ ಉಚಿತ ಕೆಟಲಾಗಿನಿಂದ ಆರಿಸಿಕೊಳ್ಳಿ.

ಸೆಕುಂಡಸ್ ನ್ಯೂ ಕೆಲಿಬರ್ ರಿಕ್ಟೆಂಗ್ಯುಲ
ನಿಕ್ಕೆಲ್ ಬೆಳ್ಳಿಯದು ರೂ.
ಪೇಟೆಂಟ್ ಥಳಥಳಿಸುವ ಉಕ್ಕು ರೂ.
ರೋಲ್ಡ್ ಗೋಲ್ಡ್
18-ಕೆ ಗಟ್ಟಿ ಭಂಗಾರ



ಸೆಕುಂಡಸ್ ನ್ಯೂ ಕೆಲಿಬರ್ ಕರ್ವಡ್
ಪೇಟೆಂಟ್ ಥಳಥಳಿಯುವ ಉಕ್ಕು ರೂ.
ರೋಲ್ಡ್ ಗೋಲ್ ರೂ.
9-ಕೆ. ಗಟ್ಟಿ ಭಂಗಾರ

buy WEST E "SECUND
Economy Series Watch

ವೆಸ್ಟ್ ಎಂಡ್ ವಾಚ್ ಕಂಪೆನಿ,
ಬೊಂಬಾಯಿ ಮತ್ತು ಕಲ್ಕತ್ತ.

WEST END WATCH Co
BOMBAY CALCUTTA

ಸರ್ ಕ್ರಿಪ್ಸ್‌ರಿಗೆ ಅಧಿಕಾರ ಸ್ವಾತಂತ್ರ್ಯ

ಇಂಡಿಯಕ್ಕೆ ಬೇಗನೆ ಬರಲಿರುವ ಸರ್ ಕ್ರಿಪ್ಸ್‌ರಿಗೆ, ಬ್ರಿಟಿಷ್ ಮಂತ್ರಿಮಂಡಲದ ಯೋಜನೆಗಿಂತಲೂ ದೂರ ಹೋಗಿ ಭಾರತಕ್ಕೆ ರಿಯಾಯತಿಗಳನ್ನು ಕೊಡಬಹುದಾದಷ್ಟು ಅಧಿಕಾರ ಸ್ವಾತಂತ್ರ್ಯವು ದೊರಕಿದೆಯಾಗಿ ನಂಬಲಾಗಿದೆ.

ಶ್ರೀ. ಎನ್. ಜಿ. ರಂಗ

ಕಳೆದ ಫೆಬ್ರವರಿ(೧೯೪೧)ಯಿಂದ, ಎಚಾರಣೆಗೆ ಗುರಿಮಾಡದೆ – ನಿರ್ಬಂಧ ವಾಸಕ್ಕೊಳಗಾಗಿದ್ದ ಶ್ರೀ. ಎನ್. ಜಿ. ರಂಗ, ಎಂ. ಎಲ್. ಎ. (ಕೇಂದ್ರ) ಅವರನ್ನು ಈಗ ವೆಲ್ಲೂರು ಜೈಲಿನಿಂದ ಯಾವ ಷರತ್ತೂ ಇಲ್ಲದೆ ಬಿಡುಗಡೆ ಮಾಡಲಾಗಿದೆ.

ಮದ್ರಾಸ್ ಹೈಕೋರ್ಟ್

ಮದ್ರಾಸ್ ಹೈಕೋರ್ಟಿನ ಕೆಲಸ ಕಾರ್ಯಗಳು ನಗರದಲ್ಲಿ ಬೇರೆ ಕಡೆ ನಡೆಯುವಂತೆ ಏರ್ಪಾಡಾಗಬೇಕೆಂದು ಅಲ್ಲಿನ ಎಡ್ವೊಕೇಟ್ ಸಂಘದವರು ಮಾಡಿಕೊಂಡ ಅರಿಕೆಗೆ, ಅದರತೀರ್ಮಾನವು ಸರಕಾರದ ಕೈಯಲ್ಲಿದೆ, ಜಸ್ಟೀಸರು ಈ ಕುರಿತು ಯಾವ ಕಾರ್ಯಕ್ರಮವನ್ನೂ ಕೈಕೊಳ್ಳಲು ಇಚ್ಛಿಸುವುದಿಲ್ಲ ಎಂಬ ಉತ್ತರವಾಗಿದೆ.

"ಕಾಮನ್ಸ್"ರ ಮಂದಿರದಲ್ಲಿ

"ಕಾಮನ್ಸರ" ಮಂದಿರದಲ್ಲಿ ಮಿ. ಚರ್ಚಿಲ್ಲರು ಒಂದು ಹೇಳಿಕೆ ಕೊಡುತ್ತ ಸರ್ ಕ್ರಿಪ್ಸ್‌ರವರ ಭಾರತದ ಭಾರದ ಕುರಿತಾಗಿಯೂ, ರಾಜಕೀಯ ಕಗ್ಗಂಟನ್ನು ಬ್ರಿಟಿಶ್ ಮಂತ್ರಿಮಂಡಲವು ಹೂಡಿದ ಒಂದು ಹೊಸ ಯೋಜನೆಯ ವಿಚಾರವಾಗಿಯೂ ಪ್ರಸ್ತಾವಿಸಿದರು.

ಮಿಲ್ಲ್ ಕೆಲಸಗಾರರ ಮೇಲೆ ಗುಂಡು ಹಾರಿತು

ಮದ್ರಾಸಿನ ಬಕ್ಕಿಂಗ್‌ಹಾಂ—ಕರ್ನಾಟಿಕ್ ಮಿಲ್ಲುಗಳಲ್ಲಿ ಕೆಲಸಗಾರರದೊಂದು ಮುಷ್ಕರವಾರಂಭವಾಗಿ, ಅದು ಹರಡಿ, ಕೆಲಸಗಾರರು ಪುಂಡಾಟಕ್ಕೆ ಆರಂಭಿಸಿ, ಪರಿಣಾಮವಾಗಿ ಪೋಲೀಸರು ಅವರ ಮೇಲೆ ಎರಡು ಮೂರು ಸಲ ಗುಂಡು ಹಾರಿಸಬೇಕಾದ ಪ್ರಮೇಯವುಂಟಾಯಿತು. ಈ ಗಲಭೆಯಲ್ಲಿ ಗುಂಡಿನಿಂದ ಸತ್ತವರು ೮ ಮಂದಿ; ಗಾಯಗೊಂಡು ಆಸ್ಪತ್ರೆಯಲ್ಲಿರುವ ಪೋಲೀಸ್ ಫೌಜಿನವರು ೩೮ ಮಂದಿ; ಬೆಂಕಿಯಾರಿಸುವವರಲ್ಲಿ ಒಬ್ಬ; ಖಾಸಿಗೆ ವ್ಯಕ್ತಿಗಳಲ್ಲಿ ಒಬ್ಬ ಹೆಂಗಸು ಕೂಡಾ ೧೭ ಮಂದಿ ಚಿಕಿತ್ಸೆಗೊಳಗಾಗಿದ್ದಾರೆ. ಸಾಮಾನ್ಯ ಗಾಯಗಳಾದವರ ಸಂಖ್ಯೆ ಸುಮಾರು ೧೦೦; ಮದ್ರಾಸ್ ಕಾರ್ಪರೇಶನಿನ ಪೊಟಿಂಗ್‌ನಲ್ಲಿ ಈ ಕುರಿತು, ನಾನ್ ಆಫೀಶಿಯಲ್ ಸದಸ್ಯರುಳ್ಳ ಒಂದು ಕಮಿಟಿ ಅನ್ವೇಷಣ ನಡೆಸುವಂತೆ ಏರ್ಪಡಿಸಬೇಕೆಂದು ತರಾವು ಮುಂಜೂರಾಗಿದೆ.

ಮಂಗಳೂರು

ಬ್ಯಾಂಕ್ ಕಟ್ಟಡದಲ್ಲಿ ನಡೆದ ಸಭೆಗಳು

ಮಂಗಳೂರು ಕೊ-ಒಪರೇಟಿವ್ ಬ್ಯಾಂಕಿನ ಆರಂಭದ ಸ್ಥಳೀಯ ಸೆಂಟ್ರಲ್ ಕೊ-ಒ ಕಟ್ಟಡದಲ್ಲಿ ಕಳೆದ ಆದಿತ್ಯ ಬಿ. ಸೆಟ್ಟಿ ಎಂ.ಎಲ್.ಎ. ಅಧ್ಯಕ್ಷತೆಯಲ್ಲಿ ಜರುಗಿತು. ಈ ನ ಅಧ್ಯಕ್ಷರಾಗಿ ಶ್ರೀ. ಪಿ. ರೂ, ಕಾರ್ಯದರ್ಶಿ ರಾಮರಾಯ ರು. ಅಲ್ಲದೆ ುಂದಿ ಡೈರೆಕ್ಟರ ಅವರಾಯರೊಬ್ಬರು; ನ ಕೊ॥ ಸಂಘಗಳ ಪ್ರತಿ ಮುಂದಿ ಇದರ ಡೈರೆಕ್ಟ ಜೀವನದ ಕಂಟ್ರಾಕ್ಟು ಜನರಿಗೆ ಒದಗಿಸಿ ಕೊಡು ನಿನ ಗುರಿ.

ಬ್ಯಾಂಕ್ ಕೊ-ಒಪರೇಟಿವ್ ರಖಂ ವ್ಯಾಪಾರದ ಸ್ಟೋರ್

ಚಿಲ್ಲರೆ ವ್ಯಾಪಾರದ ಸಹ ಸ್ಟೋರುಗಳಿಗೆ ಅಗತ್ಯವಿರುವ ದ್ರವ್ಯಗಳನ್ನು ಸರಬರಾಯಿ ಮಾಡಲು ಇದು ರಖಂ ವ್ಯಾಪಾರದ ಸೆಂಟ್ರಲ್ ಸ್ಟೋರ್ಸ್‌ನ್ನು ವ್ಯವಸ್ಥೆಗೊಳಿಸುವ ಉದ್ದೇ ಶದಿಂದ, ಕಳೆದ ಆದಿತ್ಯವಾರ, ಸೆ॥ ಬ್ಯಾಂಕ್ ಕಟ್ಟಡದಲ್ಲಿ, ಶ್ರೀ. ಎಂ. ಶಿವ ರಾಯರ ಅಧ್ಯಕ್ಷತೆಯಲ್ಲಿ ಅಂಥ ವರುಗಳ ಮತ್ತು ಕೊ-ಒಪರೇಟಿವ್ ಳ ಪ್ರತಿನಿಧಿಗಳ ಒಂದು ಗ್ ನಡೆಯಿತು.

ಜಿಲ್ಲೆಯ ಕೊ-ಒಪರೇಟಿವ್ ಇನ್ವೆಸ್ಟ್‌ಮೆಂಟ್ ಸೊಸೈಟಿ

ಈ ಜಿಲ್ಲೆಯ ಮೇಲ್ಕುಂಡ ಸೊಸೈಟಿಯ ಮೀಟಿಂಗ್, ಕಳೆದ ಆದಿತ್ಯವಾರ, ಸೆ॥ ಬ್ಯಾಂಕ್ ಕಟ್ಟಡದಲ್ಲಿ ಶ್ರೀ. ಉಳ್ಳಾಲ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಜರುಗಿತು.

ಜಮೀನು ಮತ್ತು ಮನೆಗಳ ಮಾಲಕರ ಸಭೆ

ಕಳೆದ ತಾ. ೧೩ರಲ್ಲಿ ಸ್ಥಳೀಯ ಮಿಲಾಗ್ರಿ ಶಾಲೆಯಲ್ಲಿ ಕೋರ್ಟ್ ವಾರ್ಡಿನ ಜಮೀನು ಮತ್ತು ಮನೆಗಳ ಮಾಲಕರದೊಂದು ಸಭೆ, ನಮ್ಮ ಮು॥ ಜೆಯರ್‌ಮ್ಯಾನ್ ಶ್ರೀ. ಬಿ. ವೆಂಕಟ ರಾವ್ ಬಾಳಿಗ, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಆ ವಾರ್ಡಿನಲ್ಲಿ ಟೌನ್ ಪ್ಲಾನಿಂಗ್ ಸ್ಕೀಮನ್ನು ಪ್ರವೇಶಗೊಳಿಸುವ ಕುರಿತಾಗಿ ಇರುವ ಸೂಚನೆ ಮತ್ತು ಆಕ್ಷೇಪಗಳನ್ನು ಸ್ವೀಕರಿಸುವುದೇ ಆ ಸಭೆಯ ಉದ್ದೇಶವಾಗಿತ್ತು: ಜಮೀನು ಮತ್ತು ಕಟ್ಟಡಗಳ ಮಾಲಕರ ಪರವಾಗಿ ಮಿ. ಪಿ. ಡಿ. ಸೋಜರು ಮಾತಾಡಿದರು. ಮೊದಲು ಈ ನಗರಕ್ಕಾಗಿ ಒಂದು ಯೋಜನೆ ತಯಾರಿಸಿ ಬಳಿಕ ಅಗತ್ಯ ಎದ್ದರೆ ಈ ವಾರ್ಡಿಗೂ ಒಂದು ಯೋಜನೆ ತಯಾರಿಸಬಹುದೆಂದು ಮಿ. ಸಿ. ಎಲ್. ಲೋಬರು ಸೂಚಿಸಿದರು. ಡಾ. ಅಡಪರೂ, ಜೆಯರ್‌ಮ್ಯಾನ್ ಅಧ್ಯಕ್ಷರೂ ಆಕ್ಷೇಪಗಳಿಗೆ ಉತ್ತರ ಹೇಳಿದರು. ಜೆಯರ್‌ಮ್ಯಾನರು ಈ ಜಮೀನು ಮತ್ತು ಮನೆಗಳ ಮಾಲಕರು ತಮ್ಮದೊಂದು ಸಮಿತಿ ನೇಮಿಸಿ ಅವರೀ ಪ್ರಶ್ನೆಯ ವಿಚಾರ ನಡೆಸಿ, ೧ ತಿಂಗಳೊಳಗಾಗಿ ಮು॥ ಕೌನ್ಸಿಲಿಗೆ ತಮ್ಮ ಸೂಚನೆಗಳನ್ನು ಕಳುಹಿಸಲೆಂದರು.

ಗ್ರಾಮೋದ್ಧಾರ

ಕಳೆದ ತಾ. ೧೩ರಲ್ಲಿ ಸ್ಥಳೀಯ ಕೆನರಾ ಹೈಸ್ಕೂಲಲ್ಲಿ ವಿದ್ಯಾರ್ಥಿಗಳ ದೊಂದು ಸಭೆ ಸ್ಥಳೀಯ ಗೌ॥ ಕಾ॥ ಪ್ರಿನ್ಸಿಪಾಲ್ ಶ್ರೀ. ಕೆ. ಎಸ್. ಯು. ನಾಯರರ ಅಧ್ಯಕ್ಷತೆಯಲ್ಲಿ ಜರುಗಿತು. ರಜಾಕಾಲದಲ್ಲಿ ಕಾಲೇಜ್ ವಿದ್ಯಾರ್ಥಿಗಳು ಗ್ರಾಮಾಂತರಗಳಲ್ಲಿ ಸಂಚರಿಸಿ, ಅಲ್ಲಿನ ಆರ್ಥಿಕ ಪರಿಸ್ಥಿತಿಯ ಕೈಗಾರಿಕೆಗಳೇ ಮೊದಲಾದುವುಗಳ ವಿದ್ಯಮಾನಗಳ ಕುಲಂಕಷ ವಿಮರ್ಶೆ, ತನಿಖೆ, ಪರಿಶೋಧನೆ ನಡೆಸಬೇಕೆಂಬು ದನ್ನು ಪ್ರೋತ್ಸಾಹಗೊಳಿಸಲಿಕ್ಕಾಗಿಯೇ ಈ ಸಭೆ ನೆರೆದಿತ್ತು. ಶ್ರೀಗಳಾದ ಎಚ್. ರಾಮರಾಯ ಮಲ್ಯ, ಟಿ. ಆರ್. ತಲ್ಚೇ ರಿಕರ್, ಯು. ಶಾಂತಾರಾಮ ರಾವ್ ಇವರು ಭಾಷಣ ಮಾಡಿದರು. ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀ. ಬಿ. ವಿ. ಕಕ್ಕಿಲಾಯರು ವಂದನೆ ಅರ್ಪಿಸಿದರು.

ವಿದಾಯಕ ಸತ್ಕಾರ ಕೂಟ

ಸ್ಥಳೀಯ ಗ॥ ಸೆಕಂಡರೀ ಟ್ರೈನಿಂಗ್ ವಿಭಾಗದ ವಿದ್ಯಾರ್ಥಿ ಉಪಾಧ್ಯಾಯ ಸಂಘದವರು, ಗೌ॥ ಕಾಲೇಜಿನಿಂದ ಗ॥ ಹಾ॥ ಎ॥ ಟ್ರೈನಿಂಗ್ ಶಾಲೆಗೆ ವರ್ಗ ಹೊಂದಿದ ಅಧ್ಯಾಪಕ ಶ್ರೀ. ಯು. ದೇಜು ಅವರಿಗೆ ಆ ಕಾಲೇಜ್ ಪ್ರಿನ್ಸಿಪಾಲ್ ಶ್ರೀ. ಕೆ. ಎಸ್. ಯು. ನಾಯರರ ಅಧ್ಯಕ್ಷತೆಯಲ್ಲಿ ಒಂದು ವಿದಾಯ ಕೂಟವನ್ನು ಏರ್ಪಡಿಸಿದ್ದರು. ಶ್ರೀಗಳಾದ ಪರಮೇಶ್ವರ ಮಯ್ಯ, ಪಿ. ಮಾಧವ, ಮಧ್ವನಾರಾಯಣ, ಮಹಾಬಲ ಸೆಟ್ಟರೂ, ಶಾಲಾ ಹೆಡ್‌ಮಾಸ್ಟರ್ ವಾಸುದೇವರಾಯರೂ ಕಳಾತಾಡಿದ ಮೇಲೆ ಶ್ರೀ. ದೇಜು ಅವರು ಉತ್ತರಿಸಿದರು. ಸಂಘದ ಕಾರ್ಯದರ್ಶಿ ಶ್ರೀ ಸೋಮೇಶ್ವರ ಮಯ್ಯನವರು ವಂದನಾರ್ಪಣೆ ನಡೆಸಿದರು.

NOTICE

In the Court of the District Judge of South Kanara

O. P. No. 6/1942.

Between,

Narasimha Shet— **Petitioner.**

and

Parvathi Amma & others— **Respondents.**

In the matter of the minors Kamalaksha and Gopalkrishna.

To all whom it may concern.

Take notice that on the 27th day of January 1942 the Petitioner above-named presented an application to this Court praying that a competent person may be appointed the guardian of the person and property of the above-named minors and for other reliefs, and that **the 18th day of March 1942** has been fixed for the hearing of the application; and that if you desire to oppose the said application, or to apply for the appointment of any person as guardian of the persons and property of the said minors you must appear on the said date in this Court in person or by a pleader failing which the same shall be heard and determined ex-parte.

G Somasheker Rao,
Vakil for Petitioner.

Mangalore, 10-3-1942.

ಶಾರ್ಕ್ ಲಿವರ್ ಆಯಿಲ್ (ಮದ್ರಾಸ್ ಬ್ರಾಂಡ್)

ಸರ್ವಸಾಧಾರಣ ಕಾಡ್‌ಲಿವರ್ ಎಣ್ಣೆಯಲ್ಲಿರುವ ಎರಡರಷ್ಟು ವಿಟಮಿನ್ A ಮತ್ತು ವಿಟಮಿನ್ B ಇದರಲ್ಲಿ ಒಳಗೊಂಡಿರುವುದು ಖಾತ್ರಿ.

ತ್ರಾಣಗುಂದಿಸುವ ವ್ಯಾಧಿಗಳಿಗೆ ಬಹಳ ಗುಣಕಾರಿಯಾಗಿದೆ!

— ದೌರ್ಬಲ್ಯವನ್ನು ನಿವಾರಿಸುತ್ತದೆ —

ಚಿಕ್ಕವರಲ್ಲೂ ಹಳಬರಲ್ಲೂ, ಆರೋಗ್ಯ ಹಾಗೂ ಶಕ್ತಿ ವರ್ಧಿಸುತ್ತದೆ!

— ಕೃತ್ರಿಮ ನಕಲನ್ನು ನಿರಾಕರಿಸಿರಿ —

ಏಜಂಟರು: **ಮೆಸರ್ಸ್ ಪೇರಿ & ಕೊ., ಲಿಮಿಟೆಡ್, ಮದ್ರಾಸು.**

(ಮದ್ರಾಸು ಸಂಸ್ಥಾನ ಮತ್ತು ಹೈದರಾಬಾದು, ಮೈಸೂರು, ತಿರುವಾಂಕೂರು, ಕೊಚ್ಚಿನ್, ಪುದುಕೋಟ ಮತ್ತು ಸಾಂಡೂರು ಸಂಸ್ಥಾನಗಳಿಗೆ)

ಗವರ್ನಮೆಂಟ್ ಆಯಿಲ್ ಫೇಕ್ಟರಿ, ಕಲ್ಲಿಕೋಟೆ.



ವಿಷನ್ಸ್ ಸೇವಿಂಗ್ಸ್ ಸರ್ಟಿಫಿಕೇಟನ್ನು ಕೊಳ್ಳಲು ನಿಮ್ಮಲ್ಲಿ ಒಟ್ಟಿಗೆ ೧೦ ರೂಪಾಯಿಗಳಿಲ್ಲದಿದ್ದಲ್ಲಿ ೪ ಆಣೆ ೪ ಆಣೆ ೧ ರೂಪಾಯಿ ಪ್ರಮಾಣದ ಡಿಫೆನ್ಸ್ ಸೇವಿಂಗ್ಸ್ ಸ್ಟ್ಯಾಂಪುಗಳನ್ನು ಕೊಂಡು, ಅವುಗಳನ್ನು ಪೋಸ್ಟಾಫೀಸಿನಲ್ಲಿ ಉಚಿತವಾಗಿ ಕೊಡುವ ಕಾರ್ಡಿನ ಮೇಲೆ ಅಂಟಿಸಿ ಅವುಗಳ ಬೆಲೆಯು ೧೦ರ ರೂಪಾಯಿ ಆದೊಡನೆಯೇ ಡಿಫೆನ್ಸ್ ಸರ್ಟಿಫಿಕೇಟಿಗೆ ವಿನಿಮಯ ಮಾಡಿಕೊಳ್ಳಬಹುದು.

ಎಲ್ಲಾ ವಿವರಗಳೂ ಪೋಸ್ಟ್ ಆಫೀಸಿನಲ್ಲಿ ದೊರೆಯುವುವು

ಕೊಳ್ಳಿರಿ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು G.I.78.Ka.

ನಿಮಗೂ ಮತ್ತು ನಿಮ್ಮ ದೇಶಕ್ಕೂ ಸಹಾಯ ಮಾಡಿರಿ.

ವಿಜಯದ ಬೆಲೆಯ ನಿರ್ಧಾರ

ಜರ್ಮನಿಯರನ್ನು ಸದೆ ಬಡಿಯುವಲ್ಲಿ ರಷ್ಯದವರು ತೋರಿಸುತ್ತಿರುವ ಅಸಾಧಾರಣ ಶೌರ್ಯ ಮತ್ತು ಧೃಡ ಸಂಕಲ್ಪಗಳ ವಿಚಾರದಲ್ಲಿ, ಸ್ವಾತಂತ್ರ್ಯ ಪ್ರಿಯರೆಲ್ಲರ ಮುಕ್ತಕಂಠದಿಂದ ರಷ್ಯವನ್ನು ಹೊಗಳುತ್ತಿದ್ದಾರೆ. ಅವರ ವಿಜಯದ ಮರ್ಮವು ಅದು "ಜನಗಿಳಿಯುದ್ಧ"ವೆಂಬ ಈ ಒಂದು ಮಾತಿನಲ್ಲಿಯೇ ಅಡಕವಾಗಿದೆ. ಅವರು ಸ್ವತಂತ್ರ ಮಾನವರಾಗಿ, ತಮ್ಮ ಸ್ವಾತಂತ್ರ್ಯ ರಕ್ಷಣೆಗೋಸ್ಕರವೇ ಕಾದಾಡುತ್ತಿದ್ದಾರೆ; ಅವರು ತಮ್ಮನ್ನಾಳುವ ಯಾರಿಗಾಗಿಯೂ ಯುದ್ಧ ಮಾಡುತ್ತಿಲ್ಲ.

ಸರ್. ಸ್ಟಾಫರ್ಡ್ ಕ್ರಿಪ್ಸರು ಭಾರತಕ್ಕಾಗಿ ಏನೋ ಒಂದು ದಾನದ ಗಂಟನ್ನು ಹಿಡಿದುಕೊಂಡು ಸಂತೋಷದಿಂದ ಸದ್ಯವೇ ದಯೆಮಾಡಿಸಲಿದ್ದಾರೆ. ಆ ಗಂಟಿನೊಳಗಿರುವುದೇನೆಂದು ಅವರಿಗೇ ಗೊತ್ತು. ಅದರ ಜತೆಯಲ್ಲಿ ಒಂದು ಕನ್ನಡಿಯನ್ನೂ ಅವರು ಹೊತ್ತುಕೊಂಡು ಬರುವರೇನೋ ಅದೂ ಅವರಿಗೇ ಗೊತ್ತು!

ಅದು ಹೇಗಿದ್ದರೂ, ಶ್ರೀ। ಸಿ. ರಾಜಗೋಪಾಲಾಚಾರಿಯವರು ಆ ಡಿದ ಕಾಲೋಚಿತವಾದ ಚಿರಸ್ಮರಣೀಯವಾದ ಈ ನುಡಿಗಳು ಗಮನಾರ್ಹವಾಗಿವೆ. "ಇದು ವರೆಗೆ ಯಾವುದು ಬ್ರಿಟಿಷ್ ಸಾಮ್ರಾಜ್ಯವನ್ನು ವಿಸ್ತರಿಸಲಿಕ್ಕೂ, ಆಳಲಿಕ್ಕೂ ಸಹಾಯ ಮಾಡಿತೋ ಅದೇ ಹಳೇ ಕಾರ್ಯನೀತಿಯು ಈಗ ಈ ಯುದ್ಧದ ರಕ್ಷಣಾಕಾರ್ಯಗಳಲ್ಲಿ ಅಪ್ರಯೋಜಕವೆಂದು ಸಿದ್ಧಾಂತವಾಗಿ ಹೋಗಿದೆ. ಹಳೇ ಜಗತ್ತಿನ ಮಂದಿ, ತಮ್ಮ ಹಳೇ ಮಾರ್ಗಗಳನ್ನೇ ಅನುಸರಿಸಿ, ಮುಂಬರಿಯುತ್ತಿರುವ ವಿದ್ಯಮಾನಗಳಲ್ಲಿ ಕೈ ಇಕ್ಕಲು ಅವಕಾಶ ಮಾಡಿಕೊಂಡರೆ, ಆಗ ಕೆಲವು ತಿಂಗಳಲ್ಲೇ ಅದನ್ನೆಂದಿಗೂ "ದುರುಸ್ತು" ಮಾಡಲಾಗದ ಸ್ಥಿತಿಯೇ ಅದಕ್ಕೆ ಪ್ರಾಪ್ತವಾಗುವುದು" ಎಂದಿದ್ದಾರೆ. ಸರ್ ಕ್ರಿಪ್ಸರ ದಾನದ ಗಂಟಿನಲ್ಲಿ ಶ್ರೀ। ಆಚಾರಿಯವರ ಆ ನುಡಿಗಳನ್ನು ಮನ್ನಿಸುವ "ಸರಕುಗಳು" ಏನಾದರೂ ಇದ್ದೀತೇ? ಇದ್ದರೆ ಸಂತೋಷ!

"ಊಹನೆಯ ಅಭಾವ, ಹಳೆಯ ಸಂಪ್ರದಾಯಗಳ ಮೇಲಿನ ಪ್ರೇಮ ಮತ್ತು ಸ್ಥಾಪಿತವಾಗಿ ಹೋದ ಆ ಹಿತಾಸಕ್ತಿಗಳ ರಕ್ಷಣೆಯ ಕುರಿತಾದ ಅಭಿಮಾನ ಇವು, ಬ್ರಿಟಿಷ್ ಕಾರ್ಯನೀತಿಯ ಹೃತ್ಪೂರ್ವಕವಾದ ಬದಲಾವಣೆಗೆ ಅವಕಾಶವನ್ನು ಉಂಟುಮಾಡಿಕೊಡದೆ ಇವೆ. ಆದರೆ ಆ ಕಾರ್ಯನೀತಿಯ ಬದಲಾವಣೆಯಿಂದ ಮಾತ್ರವೇ, ಬ್ರಿಟಿಷರು ಪೂರ್ವ ದೇಶಗಳಲ್ಲಿ ಎದ್ದ ಆ ಬಿರುಗಾಳಿಯನ್ನು ತಡೆಯಬಲ್ಲರು" ಎಂದು ಬ್ರಿಟಿಷರ ಪತ್ರಿಕೆಯಾದ "ಲಂಡನ್ ಟ್ಯಾಮ್ಸ್" ಕೆಲ ಕಾಲದ ಹಿಂದೆ ಲೇಖ ಬರೆದಿತ್ತು. ಅನ್ನುವಾಗ, ಸರ್. ಕ್ರಿಪ್ಸರ ದಾನದ ಗಂಟಿನಲ್ಲಿ ಆ ಬಿರುಗಾಳಿಯನ್ನು ಅಡಗಿಸುವ ಸಾಧನಗಳೇನಾದರೂ ಇದ್ದೀತೇ? ಹೇಗೆ?

ಲಾರ್ಡ್ ಲಿಟನ್ ಸಾಹೇಬರು "ಟ್ಯಾಮ್ಸ್" ಪತ್ರಿಕೆಗೊಂದು ಲೇಖ ಬರೆದು, ಅದರಲ್ಲಿ, ಭಾರತ ನರೇಂದ್ರರ, ಯುದ್ಧ ವೀರರ ಮತ್ತು ವ್ಯಾಪಾರಿ ವರ್ಗದವರ ಸಹಕಾರವನ್ನು ದೊರಕಿಸಿಕೊಳ್ಳಲು ಸರಕಾರವು ಮಾಡಿದ ಪ್ರಯತ್ನಗಳು ಸಾಲವು ಎಂಬಂತೆ ಸೂಚಿಸಿದ್ದಾರೆ. ಇದಕ್ಕಾಗಿ ಆ ಮೂರು ವರ್ಗದವರೂ, ಪ್ರಭುಗಳಿಗೆ ಕೃತಜ್ಞರಾಗಿರಬೇಕಾದುದೂ, ಅವರೆಲ್ಲರ ಸಹಾಯವೂ ಸರಕಾರಕ್ಕೆ ಅಗತ್ಯವಾಗಿರುವುದೂ ನಿಜವೇ ಆದರೂ, ಅವರು ಮಾತ್ರವೇ ಸಮಗ್ರ ಭಾರತದ ಪ್ರತಿನಿಧಿಗಳು ಎಂಬುದನ್ನು ಒಪ್ಪಲಾಗದು. ಆ ಮೂರು ವರ್ಗದವರ ನೈತಿಕ ಹಾಗೂ ವಾಸ್ತವಿಕ ಬೆಂಬಲದಿಂದಲೇ, ಭಾರತದ ರಾಜ್ಯಾಡಳಿತವನ್ನೂ, ರಕ್ಷಣೆಯ ಕಾರ್ಯಗಳನ್ನೂ ಸಾಗಿಸಲಾಗದು. ಪರಕೀಯರ ಜಗಳ ಗಂಟತನವನ್ನು, ಆ ದೇಶೀಯ ಸಂಸ್ಥಾನಗಳ ಸಹಾಯದಿಂದಲೇ ಪರಿಹರಿಸಬಹುದೆಂದು ಯಾರೂ ತಿಳಿದುಕೊಳ್ಳಲಾರರು. ಅಥವಾ ಯಾವುದಾದರೂ ಕೃತಕವಾದ ಉಪಾಯದಿಂದ, ಆ ಕಾರ್ಯಕ್ರಮಗಳು ಯಶಸ್ವಿಯಾಗಿ ಕೊನೆಗಾಣವು. ಇಂಡಿಯದ ಒಗ್ಗಟ್ಟಿನ ಶಕ್ತಿಯ ಮೂಲವು, ಇದು ವರೆಗೆ ಶೋಷಣೆಗೆ ಗುರಿಯಾದ ಜನಸಾಮಾನ್ಯದಲ್ಲಿಯೇ ಅಡಗಿದೆ. ರಾಷ್ಟ್ರದ ರಾಜ್ಯಾಡಳಿತದ ಮುಂಡಲಿಯಲ್ಲಿ, ತಮ್ಮ ಅಭಿಪ್ರಾಯದ ವ್ಯವಸ್ಥೆಗೊಂಡ ಪ್ರತಿಧ್ವನಿ, ಸರಿಯಾಗಿ ಕೇಳಿ ಬರುತ್ತಿದೆ ಎಂದು ತಿಳಿದು ಬರುವಾಗ, ತಾವು ಜಗಳಗಂಟತನದ ವಿರುದ್ಧ ಕಾದಾಡುವುದು, ತಮ್ಮ ಸ್ವಂತದ ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಗಳಿಗಾಗಿಯೇ ಎಂದು ಭಾರತದ ಜನ ಸಾಮಾನ್ಯವು ತನ್ನ ಅನುಭವಕ್ಕೆ ತಂದುಕೊಳ್ಳುವಾಗ, ಆಗ ಭಾರತದ ರಕ್ಷಣೆಗಾಗಿ ಏರ್ಪಡಿಸುವುದು ಸುಲಭ. ವಿಜಯೋತ್ಸವವು ಬೀಸುತ್ತಿರುವ ಬೆಲೆಯಾದರೂ ಇದೇ.

"ಸರಕಾರದ ಸೂಚನೆ" ಎಂಬ ದಾನದ ಗಂಟಿನೊಡನೆ, ಭಾರತೀಯರ ಅನುಮತಿ ಪಡೆಯಲು ಇಲ್ಲಿಗೆ ದಯೆ ಮಾಡಿಸುವ ಸರ್. ಕ್ರಿಪ್ಸರು, ಅಂಥ ಅನುಭವಕ್ಕೆ ಯೋಗ್ಯವಾದ ರಿಯಾಯಿತಿಗಳನ್ನೇನಾದರೂ ನಮಗೆ ತಂದು ಕೊಡಲಿರುವರೇ, ಹೇಗೆ? ಭಾರತೀಯರೆಲ್ಲರಿಗೂ ಒಪ್ಪಿಗೆಯಾಗುವಂಥ ಸುಧಾರಣೆಗಳನ್ನೇ, ಸರಕಾರವು ಅಲ್ಲಿ ಸೂಚಿಸಿರುವುದಾದರೆ, ಆ ಸೂಚನೆಗಳನ್ನು ಅಲ್ಲಿಯೇ ಪ್ರಕಟಿಸದೆ, ಇಲ್ಲಿಗೆ ಬಂದು ಇಲ್ಲಿ ಭಾರತೀಯರನ್ನು ಅದಕ್ಕೆ ಒಪ್ಪುವಂತೆ ಮಾಡುವ ಈ "ಮಧ್ಯಸ್ತಿಕೆ"ಯ ಹೆಚ್ಚಿನ ಕೆಲಸವು ಏಕೆ ಅಗತ್ಯವಾಗಿತ್ತೋ ಹೇಳಲಾಗದು!

ಆಯುರ್ವೇದ ಸಾರ

ಅಮೂಲ್ಯ ಕನ್ನಡ ವೈದ್ಯ ಗ್ರಂಥ

ಪಂಡಿತರು ಅಗತ್ಯವಾಗಿ ತಿಳಿದಿರಬೇಕಾದ ತತ್ವಗಳನ್ನೆಲ್ಲಾ ಬಹು ಗ್ರಂಥಗಳಿಂದ ಸಂಗ್ರಹಿಸಿ, ಬೇಕಾದಲ್ಲಿ ಪಾಶ್ಚಾತ್ಯ ಡಾಕ್ಟರರ ಮತ ಸಹ, ವಿರಳವಾಗಿ ವರ್ಣಿಸಿರುವ ಕನ್ನಡ ಗ್ರಂಥ ಇದು ಒಂದೇ. ಬಹು ಪ್ರಯೋಜನಕಾರಿಯಾಗಿ ಕಂಡ ಅನೇಕ ಹೊಸ ಔಷಧ ಯೋಗಗಳು ಮತ್ತು ಸ್ವತಂತ್ರವಾಗಿ ಚಿಕಿತ್ಸೆ ಮಾಡುವದಕ್ಕೆ ಬೇಕಾದ ಬಹಳ ಅನುಭವಗಳು ಇದರಲ್ಲಿ ಇವೆ. ನಾಡೀ ಪರೀಕ್ಷೆ ವಿಷಯದಲ್ಲಿ ಬೇರೆಲ್ಲಿಯೂ ಕಾಣದ ವಿಶೇಷ ಮಾಹಿತು ಸಹ ಈ ಪುಸ್ತಕಗಳಲ್ಲಿ ಇದೆ. 'ಸ್ನಾಯುಮಂಡಲದ ರಚನೆ ಮತ್ತು ಅಧಿಕಾರ', ಪ್ರತಿ ಅಧ್ಯಾಯದಲ್ಲಿ 'ದೃಷ್ಟಫಲ ಚಿಕಿತ್ಸೆ,' 'ಪೃಥಗ್ಯೋಗೋಕ್ತೌಷಧಗಳು', 'ಪ್ರಕರಣಾನ್ತ ಟಿಪ್ಪಣಿ'. ಇವೇ ಮೊದಲಾದವು ದ್ವಿತೀಯ ಭಾಗದ ವಿಶೇಷಗಳು.

"ನನಗೆ ತಿಳಿದ ಮಟ್ಟಿಗೆ ಶ್ರೀ। ರಾಮಕೃಷ್ಣಯ್ಯನವರ ಆಯುರ್ವೇದ ಸಾರಕ್ಕೆ ಸಮಾನವಾದ ಪುಸ್ತಕ ಬೇರೊಂದಿಲ್ಲ.....ಅವರ ಆ ಗ್ರಂಥಗಳಿಗಾಗಿ ಅವರು ಕರ್ಣಾಟಕದಲ್ಲಿ ಇಂದು ಒಬ್ಬ ವೈದ್ಯಗುರುವಿನ ಪದವಿಯಲ್ಲಿದ್ದಾರೆ." (ತಾರಾನಾಥ ಪಂಡಿತಜಿಯವರ "ಪ್ರಸಿದ್ಧ ರಸೌಷಧಿಗಳು" ಪುಟ 10.)

ಪ್ರತಿ ಬೇಕಾದವರು ತ್ವರೆಯಾಗಿ ಕೆಳಗಣ ವಿಳಾಸಕ್ಕೆ ಬರಕೊಳ್ಳಬೇಕು. ಎರಡು ಅಥವಾ ಹೆಚ್ಚು ಪ್ರತಿಗಳನ್ನು ಒಮ್ಮೆಯೇ ಕೊಂಡು ಕೊಳ್ಳುವವರಿಗೆ ರೂಪಾಯಿಗೆ ಒಂದಾಣೆಯಿಂದ ಎರಡಾಣೆ ವರೆಗೆ ಯುಕ್ತ ಕಂಡ ಡಿಸ್ಕೌಂಟು ಕೊಡಲಾಗುವುದು.

ಪ್ರಥಮ ಭಾಗ (೬೦೦ ಪುಟ) ರೂ. 6–8–0.
ದ್ವಿತೀಯ ಭಾಗ (೭೫೦ ಪುಟ) ರೂ. 6–8–0
(ಟಪಾಲು ಹಾಕಲು ಬೇರೆ)

ವಿಳಾಸ:- ಶ್ರೀ ರಾಮಕೃಷ್ಣಯ್ಯ, ಬಿ. ಎ.,
(ನೃತ್ತ) ಜಿಲ್ಲಾ ರಿಜಿಸ್ಟ್ರಾರ್,
ಕಂಬಳ, ಪೋಸ್ಟ್ ಮಂಗಳೂರು.


ಬಲ್ಲಪ್ಪನುತ್ತು ಒಲ್ಲಪ್ಪ
ಬಲ್ಲಪ್ಪ:-ದೇಶದ ಸ್ಥಿತಿಗತಿ ಸಂಬಂಧವಾದ ಈ ರಿಪೋರ್ಟ್ ಸಭೆಯಲ್ಲಿ ಭಾಗವಹಿಸಲು ನಮಗೆ ಅವಶ್ಯವಾಗಿ ತಿಳಿಸಬೇಕಾದ ವಿಷಯಗಳನ್ನೆಲ್ಲಾ ಸೂಚಿಸುತ್ತದೆ.
ಒಲ್ಲಪ್ಪ:-ನನಗೆ ಅದೇಕೊ ಅರ್ಥವ್ಯಾಪ್ತಿಸುವುದಿಲ್ಲ. ಸಭಾ ಭಾಷಣ ಮಾಡುವುದಿದ್ದರೆ ನನ್ನ ಬುದ್ಧಿಯು ಯಾವ ವಿಷಯವನ್ನೂ ಗ್ರಹಿಸುವುದಿಲ್ಲ. ಪುನಃ ನೀನೇ ವಹಿಸು.
ನಿನ್ನಂತೆ ಏಕಾಗ್ರಚಿತ್ತದಿಂದ ಕೆಲಸ ಮಾಡಲು ನನಗೇಕೆ ಸಾಧ್ಯವಿಲ್ಲ.
ಬಲ್ಲಪ್ಪ:-ಬುದ್ಧಿಯು ಸ್ವಚ್ಛವಾಗಿಯೂ ಚುರುಕಾಗಿಯೂ ಇಲ್ಲದಿದ್ದರೆ ಯಾರಿಗೆ ತಾನೆ ಸಾಮರ್ಥ್ಯತೆಯಿಂದ ಕೆಲಸ ಮಾಡಲು ಸಾಧ್ಯವಾಗುವುದು? ನನ್ನ ಹಾಗೆಯೇ ನೀನೂ
ಈನೊಸ್
"ಫ್ರೂಟ್ ಸಾಲ್ಟ್"
ಪ್ರತಿ ಬೆಳಿಗೆ ತೆಗೆದುಕೊಳ್ಳಬೇಕು. ಮತ್ತು ದಿನವೆಲ್ಲಾ ಬುದ್ಧಿ
ಭ್ರಮೆಯಿಲ್ಲದೆಯೂ ಚುರುಕಾಗಿಯೂ ಇರಬೇಕು.
ಆಹಾರವೃತ್ತಿಗಳ ಅಜಾಗ್ರತೆಯಿಂದಾಗುವ ಶಾರೀರಕ ಅವ್ಯವಸ್ಥೆಗಳಾದ ತಲೆನೋವು, ಪೈತ್ಯ, ಅಜೀರ್ಣ ಮಲಬದ್ಧತೆ ಇವನ್ನು ವಾಸಿಮಾಡಿಕೊಳ್ಳದಿದ್ದರೆ ಬುದ್ಧಿಯು ಸ್ವಚ್ಛ ಹಾಗೂ ಚುರುಕು ಇರಲಾರದು. ಬೆಳಿಗ್ಗೆ ಎದ್ದೊಡನೇ ಒಂದು ಲೋಟ ತಿಳಿ ಈನೊಸ್ ಸೇವಿಸಿದರೆ, ಈ ವ್ಯಾಧಿಗಳೆಲ್ಲಾ ನಿರ್ಮೂಲವಾಗುವುವು. ಆರೋಗ್ಯ ಶರೀರವೂ ಚುರುಕುಬುದ್ಧಿಯೂ ನಿಮ್ಮದಾಗುವುದು.
ಈನೊಸ್ ತನ್ನ ಉಲ್ಲಾಸವನ್ನು ಶೀಸೆ ತೆರೆದ ಮೇಲೆ ಕೂಡ ಕಳೆದುಕೊಳ್ಳುವುದಿಲ್ಲ. ಯಾತಕ್ಕೆಂದರೆ ವಾಯು ಸಂಚಾರಕ್ಕವಕಾಶಕೊಡದ ಒರಟಿಗಳುಳ್ಳ ಶೀಸೆಗಳಲ್ಲಿಯೇ ಅದು ಮಾರಲ್ಪಡುತ್ತದೆ. ಡಬ್ಬಿಗಳಲ್ಲಲ್ಲ.
1937

Please write to us for your needs in

RUBBER STAMPS

Monogram Seals, Peon Badges, Sign Boards, Marble Boards, Facsimile Stamps, Embossing, Etc.

CROWN RUBBER STAMP CO.,

A17, Balmatta Road (Estd: 1926) MANGALORE.

(Among the list of Mysore Govt.'s approved Firms.)
Certified by the Agent of India, Ceylon.

ಮಕ್ಕಳಿಗೆ ಇಂಗರೆ ಬಾಲಾಮೃತವು

ಹರ್ಷಕರವಾದ ಪೌಷ್ಟಿಕ. ಇದು ಮಧುರವಾಗಿದೆ.

ಭಾಗ್ಯಚಕ್ರ

(ಪುಟದಿಂದ ಮುಂದುವರಿದುದು)

ಘಟನೆಯಿಂದ ಉಂಟಾದ ದುರ್ಘಟನೆಯನ್ನು ಕೇಳಿದೊಡನೆ ತಲೆ ತಿರುಗಿತು. 'ಸ್ವಯಾಗಿದ್ದರೆ?' ಎಂಬ ಸಂಶಯವು ಡಿತು. ಆತನು ಪರೀಕ್ಷಿಸಲು ಶವ ಡೆಗೆ ಹೋದನು. ಶವದ ಗುರುತು ಗೆ ಹತ್ತಲಿಲ್ಲ. ಆದರೆ ರುಮಾಲನ್ನು ದೊಡನೆ, ಆತನಿಗೆ ಆ ಶವಗಳು ೀಮಪುತ್ರಿಯ ಮತ್ತು ಪತ್ನಿಯ ೃಥವಾಯಿತು. ಶವದ ಮೇಲೆ ೋಳಾಡ ತೊಡಗಿದನು. ಸುಧೆ ಇಲ್ಲದ ಜಗತ್ತೇ ಆತನಿಗೆ ಅಂಧಕಾರ ಮಯವಾಗಿ ಭಾಸವಾಯಿತು. ನಂತರ ಅವನು ಶವಸಂಸ್ಕಾರವನ್ನು ಜರುಗಿಸಿ, ವೈರಾಗ್ಯದಿಂದ ಕಾಶಿಯತ್ತ ತೆರಳಿದನು. ಈಗ ದಿನೇಶನು ಸನ್ಯಾಸಿ! ಜಟೆ ಬೆಳೆಯಿಸಿ, ಹಾಡುತ್ತಾ, ಭಿಕ್ಷೆ ಬೇಡುತ್ತಾ ದಿನವನ್ನು ಕಳೆಯತೊಡಗಿದನು.

ಮೇಲಿನ ಘಟನೆಯು ಜರುಗಿ ಹದಿನಾಲ್ಕು ವರುಷಗಳು ಸಂದುವು. ದಿನೇಶನ ಪತ್ತೆ ನಡೆಸಲು, ಸುಧೆ ಮಾಡಿದ ಉಪಾಯಗಳೆಲ್ಲ ವ್ಯರ್ಥವಾದುವು. ದಿನೇಶನಿಲ್ಲದ ಸಂಸಾರವು ಅವಳಿಗೆ ನೀರಸವಾಗಿತ್ತೆಂದು ಬೇರೆ ಹೇಳಬೇಕೆ? ಆಕೆಯ ಮುಖಮಂಡಲವು ಚಿಂತಾಗ್ನಿಯಿಂದ ಬೆಂದು ಕಂದಿಹೋಯಿತು. ಶರೀರವು ಸವೆಯುತ್ತಾ ಬಂತು. ಆದರೂ, ಆಕೆಯು ದಿನೇಶನ ದರುಶನಾಭಿಲಾಷೆಯಿಂದ ನಿರಾಶೆಗೊಳ್ಳಲಿಲ್ಲ. ಅವಳ ಕಣ್ಣುಗಳು ಪತಿದೇವನ ದಿವ್ಯದರುಶನಕ್ಕಾಗಿ ಪ್ರತಿದಿನವೂ ಕಾದುಕೊಂಡಿದ್ದುವು.

ಒಂದು ದಿನ ಪ್ರಭಾತಸಮಯದಲ್ಲಿ, ಸುಧೆ ಸ್ನಾನಮಾಡಿ, ಒಂದು ಕೋಣೆಯಲ್ಲಿ ಕುಳಿತುಕೊಂಡು, ತನ್ನ ಹೃದಯೇಶ್ವರನ ಚಿತ್ರವನ್ನು ನೋಡುತ್ತಾ, ಭೂತಕಾಲದ ಸುಖಸಂತೋಷಗಳನ್ನು ನೆನಸಿ ಕಣ್ಣೀರು ಮಿಡಿಯುತ್ತಿದ್ದಳು. ಇಷ್ಟರಲ್ಲಿ ರಸ್ತೆಯಲ್ಲಿ ಒಬ್ಬ ಸನ್ಯಾಸಿಯು "ತೂ ರಾಮ್ ಭಜನೆ ಕರ್ ಪ್ರಾಣಿ" ಎಂಬ ಹಾಡುವ ಸ್ವರವು ಕೇಳಿಸಿತು. ಆ ಪದದಿಂದ ಸುಧೆಯ ನೊಂದ ಹೃದಯಕ್ಕೆ ಸ್ವಲ್ಪ ಸಮಾಧಾನ ಸಿಕ್ಕಿತು. ಆಕೆಯು ಕೂಡಲೇ ಆ ಸಾಧುವನ್ನು ಕರೆಸಿದಳು. ಸಾಧುವು ಸುಂದರನೂ, ಶಾಂತ ಸ್ವಭಾವದವನೂ ಆಗಿದ್ದನು. ಸಾಧುವು ಪುನಃ ಅದನ್ನು ಹಾಡಿದನು. ಈ ವರೆಗೆ ಒಳಗೆ ಕೂತ ಸುಧೆಯು ಹೊರಗೆ ಓಡಿಬಂದು, ಸನ್ಯಾಸಿಯ ಕಾಲುಗಳನ್ನು ಹಿಡಿದು "ಸ್ವಾಮಿ! ಇಂದು ನನ್ನ ಜನ್ಮ ಸಾರ್ಥಕವಾಯಿತು" ಎಂದು ಆನಂದ ಬಾಷ್ಪಗಳನ್ನು ಸುರಿಸತೊಡಗಿದಳು.

ಕೂಡಲೇ ಮನೆಯವರೆಲ್ಲರೂ "ದಿನೇಶ" ಎಂದು ಬೊಬ್ಬಿಡತೊಡಗಿದರು. ಇದೇ ಸಮಯದಲ್ಲಿ ದಿನೇಶನಿಂದ ಉಪಕೃತನಾಗಿ ಶಿಕ್ಷಣವನ್ನು ಪಡೆದ 'ಮುರಾರಿ' ಎಂಬ ಹರಿಜನ ಯುವಕನು, ತಾನು ಬಿ. ಎ.ಯಲ್ಲಿ ಫಸ್ಟ್ ಕ್ಲಾಸಿನಲ್ಲಿ ಪಾಸಾದ ಶುಭ ಸಮಾಚಾರವನ್ನು ಸುಧೆಗೆ ತಿಳಿಸಲು ಅಲ್ಲಿಗೆ ಬಂದನು. ಅಲ್ಲಿ ತನ್ನ ಉನ್ನತಿಗೆ ಕಾರಣಭೂತನಾದ ದಿನೇಶನನ್ನು ನೋಡಿ, ಆತನು ಆನಂದಾತಿರೇಕದಿಂದ ಆತನ ಕಾಲುಗಳಿಗೆ ಬಿದ್ದನು. ಆಗ ದಿನೇಶನು ಮುರಾರಿಯನ್ನು ಎಬ್ಬಿಸಿ "ಮುರಾರಿ! ನೀನು ಉತ್ತೀರ್ಣನಾದ ಶುಭಸೂಚನೆಗಾಗಿ, ನಿನಗೆ ಒಂದು ಉಪಹಾರವನ್ನು ಅರ್ಪಿಸಬೇಕೆಂದಿರುವೆನು. ಸ್ವೀಕರಿಸುವೆಯಾ?" ಎಂದನು.

ಈ ಸಮಯದಲ್ಲಿ ದಿನೇಶನ ಪುತ್ರಿ ವಸಂತಿಯು ಹದಿನಾರು ವರ್ಷದ ಸುಂದರ ತರುಣಿಯಾಗಿದ್ದಳು. ದಿನೇಶನು ಪುತ್ರಿಯನ್ನು ಕರೆದು, ಮುರಾರಿಯೊಡನೆ "ನಾನು ನಿನಗೆ ಅರ್ಪಿಸಲಿರುವ ಅಮೂಲ್ಯವಾದ ವಸ್ತುವೆಂದರೆ ನನ್ನ ಪ್ರೀತಿಯ ಪುತ್ರಿಯಾದ ವಸಂತಿ!" ಎಂದನು. ಅನಂತರ ಸುಧೆಯೊಡನೆ "ಸುಧಾ! ಅಗಲಿದ ನಾವು ಇಂದು ಕೂಡಿದ ದಿನವೇ ಸುದಿನ! ಈ ಶುಭ ದಿನದ ಚಿರಸ್ಮರಣೆಗಾಗಿ, ಇಂದೇ ಮುರಾರಿ ಮತ್ತು ವಸಂತಿಯರ ವಿವಾಹವನ್ನು ನೆರವೇರಿಸುವ" ಎಂದನು. ಆ ಶುಭ ಅವಸರದಲ್ಲಿಯೇ ಮುರಾರಿ ವಸಂತಿಯರ ವಿವಾಹವು ಬಹು ವಿಜೃಂಭಣೆಯಿಂದ ನೆರವೇರಿತು.

ಮದ್ರಾಸು ಗವರ್ನರರ ಯುದ್ಧ ಫಂಡು

ದ. ಕ. ಜಿಲ್ಲೆಯಲ್ಲಿ ದಶಂಬರ ತಿಂಗಳಲ್ಲಿ ಧನಸಹಾಯ ಮಾಡಿದವರ ಹೆಸರಿನ ಪಟ್ಟಿ.

ಭಾಗ ೧

5—0—0

(5) ಏ. ರಾಘವೇಂದ್ರರಾವ್; (4) ಎಂ. ವೆಂಕಟಪ್ಪ; (4) ಬೈಲ್ ಗೋಪಾಲ ಕೃಷ್ಣಯ್ಯ; (4) ಕೆ. ಆರ್. ವೆಂಕೋಬರಾವ್; (3) ರೈ ಸಾಹೇಬ್ ಈ. ಸಿ. ಎಂ. ಮಸ್ಕರೇಂಜಸ್.

ಭಾಗ ೩

1001—0—0

ಅಪೋಸ್ತಾಲಿ ಕಾರ್ಮೆಲಿಕ್ ಶಾಲಾ ಮತ್ತು ಕಾಲೇಜುಗಳ ಶಿಕ್ಷಕರು ಮತ್ತು ವಿದ್ಯಾರ್ಥಿಗಳು. ಪುತ್ತೂರು ತಾಲೂಕು ವಾರ್ ಸಬ್ ಕಮಿಟಿ.

1000—0—0

ಸೈಂಟ್ ಅಲೋಶಿಯಸ್ ಕಾಲೇಜಿನ ಶಿಬಂದಿ ಮತ್ತು ವಿದ್ಯಾರ್ಥಿಗಳು.

600—0—6

ಕಾಸರಗೋಡು ತಾಲೂಕು ವಾರ್ ಸಬ್ ಕಮಿಟಿ.

300—0—0

ಡಾ। ಕೆ. ಮಾಧವ ನಾಯಕ್.

250—0—0

ವಾಲ್ಕಾರ್ಟ್ ಬ್ರದರ್ಸ್; ಮಂಗಲಪಾಡಿ ಗ್ರಾಮಸ್ಥರು; ಗವರ್ನ್‌ಮೆಂಟ್ ಕಾಲೇಜ್ ಶಿಬಂದಿ.

ವೈವಾಹಿಕ ಜೀವನದ ಪೂರ್ಣ ಸುಖವನ್ನು ಪಡೆಯಲು
"ಡಾ। ಮಹಾಂಬ್ಸ್ ನೈಟ್ ಪಿಲ್ಸ್" ಉಪಯೋಗಿಸಿ:

"ಡಾ॥ ಮಹಾಂಬ್ಸ್ ನೈಟ್ ಪಿಲ್ಸ್" ಗಂಡಸರಿಗೂ, ಹೆಂಗಸರಿಗೂ, ನರಗಳ ದೌರ್ಬಲ್ಯ ನಿದ್ರಾಭಂಗ, ಸ್ಮರಣ ಮತ್ತು ಶಕ್ತಿಯ ಕುಂದುವಿಕೆ, ನಿಶ್ಚೈತನ್ಯ ಇವುಗಳಿಗೆಲ್ಲಾ ಅತ್ಯಮೋಘ ಟಾನಿಕ್ ನಪುಂಸಕತ್ವವನ್ನೂ ಇಂದ್ರಿಯಸ್ಖಲನವನ್ನೂ ಗುಣಪಡಿಸುವದು. ಕ್ಷಣದಲ್ಲಿ ಪೂರ್ಣ ಚೈತನ್ಯ, ಸಾಮರ್ಥ್ಯ ಮತ್ತು ತೇಜಸ್ಸನ್ನುಂಟುಮಾಡಿ ವೈವಾಹಿಕ ಜೀವನದ ಪೂರ್ಣ ಸುಖವನ್ನನುಭವಿಸಲು ಸಹಾಯವನ್ನೀಡುವುದು. ಅದು ಅಮಲು ಪದಾರ್ಥಗಳಿಂದ ವಿರಹಿತವಾಗಿದ್ದು ಏನೊಂದು ತರದ ಬಾಧಾಕಾರಿಯಾಗಿರುವುದಿಲ್ಲ. ಒಂದು ಪೆಟ್ಟಿಗೆಯಲ್ಲಿ ಹತ್ತು ಬಾರಿಯ ಸೇವನೆಗೆ ಸಾಕಷ್ಟಿದ್ದು ಸಂಪೂರ್ಣ ನವಯೌವನವನ್ನು ಪಡೆಯಲು ಸಾಕಾಗಿದೆ. ಒಂದೇ ಬಾರಿಯ ಸೇವನೆಯಿಂದ ಯಾವದಾದರೊಂದು ಸಂದರ್ಭದಲ್ಲಿ ಪ್ರಯೋಜನವನ್ನು ಪಡೆಯಬಹುದಾಗಿರುವದರಿಂದ, ಯಾವನೊಬ್ಬ ವೈವಾಹಿತನೂ ಒಂದು ಪೆಟ್ಟಿಗೆಯನ್ನು ವಶವಿಟ್ಟುಕೊಳ್ಳಲು ತಪ್ಪಲಾರದು. ಉಪಯೋಗಿಸಿದ ಸ್ವಲ್ಪ ನಿಮಿಷಗಳೊಳಗಾಗಿಯೇ ಅದರ ಕ್ರಿಯಾಶಕ್ತಿಯು ಆರಂಭವಾಗಿ ಚೈತನ್ಯವೂ, ಶಕ್ತಿಯೂ ವರ್ಧಿಸುವುದು. ಪ್ರಾಯದ ಪರಿಮಿತಿಯೇ ಇಲ್ಲದೆ ಪ್ರತಿಯೊಂದು ಬಾರಿಯೂ ಪ್ರತಿಯೊಬ್ಬನೂ ಪೂರ್ಣ ಸಮಾಧಾನವನ್ನು ನಿಜವಾದ ರತಿಸುಖದ ಅನುಭವವನ್ನೂ ಪಡೆಯುತ್ತಾನೆ. "ಡಾ॥ ಮಹಾಂಬ್ಸ್ ನೈಟ್ ಪಿಲ್ಸ್" ಅತ್ಯಲ್ಪ ಸಮಯದೊಳಗಾಗಿ ಅತ್ಯಧಿಕ ದೃಢತೆಯಿಂದ ನವಯೌವನವನ್ನು ತರಲು ತಯಾರಿಸಿದ ಪ್ರಪಂಚದ ಅತ್ಯಂತ ಫಲಕಾರಿಯಾದ ಗಿಡಮೂಲಿಕಾ ಸಂಬಂಧವಾದ ಟಾನಿಕ್ ಆಗಿರುತ್ತದೆ. ಪೆಟ್ಟಿಗೆಯೊಂದರ ಬೆಲೆ ರೂ. ೫, ಪೋಸ್ಟೇಜು ಆಣೆ ೯. ಸೀಲುಗಳು ಶ್ರೇಷ್ಠವಾಗಿವೆಯೋ ಎಂಬುದನ್ನು ನೋಡಿ. ಎಲ್ಲಾ ಉತ್ತಮ ಕೆಮಿಸ್ಟರಲ್ಲಿಯೂ ಬಿಕರಿ ಮಾಡಲ್ಪಡುತ್ತದೆ.

ಏಜೆಂಟರು:— **ಅಪ್ಪಾ ಅಂಡ್ ಕಂಪೆನಿ, ಅಪ್ಪಾ ಬಿಲ್ಡಿಂಗ್ಸ್, ಚೈನಾ ಬಜಾರ್, ಮದ್ರಾಸು.**

ನೀವು ಏಕೆ ಜೀವ ವಿಮೆ ಇಳಿಸಬೇಕು.

ಇಂದೇ ವಿಮೆ ಇಳಿಸಿ	ಕಂದೆಯ ಹಂಬಲು ಹೆಂಡತಿಯ ಬಾಧ್ಯತೆ ಮಗುವಿನ ಹಕ್ಕು ಕುಟುಂಬದ ಆನಂದ	ನಾಳೆಗೆ ಉಪಭೋಗಿಸಿ

"ದಿ ಭಾರತಮಾತ"ದ ಸಕಾಲದ ಕರೆಯನ್ನು ಗಮನವಿಟ್ಟು ಕೇಳಿ; ಪೂರ್ಣ ಪ್ರಯೋಜನ ಹೊಂದಿಕೊಳ್ಳಿ. ಅವಳು ಭರವಸೆ ಕೊಡುತ್ತಾಳೆ. ಮಿತವ್ಯಯವು ಅದೃಷ್ಟವನ್ನು ತರುವುದು; ಸಂತತಿಗೆ ಉಳಿಸಿಕೊಡುವುದು.

ಮಿತವ್ಯಯ ಮಾಡಿ

The Bharatha Matha Provident Assurance Co. Ltd.,

TUTICORIN.

ದಿ ಭಾರತಮಾತಾ ಪ್ರೊವಿಡೆಂಟ್ ಎಶ್ಯೂರೆನ್ಸ್ ಕ.ಲಿ.

ಟು ಟಿ ಕೋ ರಿ ನ್.

— ಇದರಲ್ಲಿ ವಿಮೆ ಇಳಿಸಿ —

ಏಜಂಟರು ಬೇಕು—ಉದಾರ ಶರತ್ತುಗಳು. ತಲಬು ಮತ್ತು ಕಮಿಶನ್.

ಬರಕೊಳ್ಳಿ:— ಕೆ. ಜನಾರ್ಧನ ಕಲ್ಲೂರ್,

ಆರ್ಗೆನ್ಯಾಜಿಂಗ್ ಆಫೀಸು, ಕೊಳದ ಪೇಟೆ, ಉಡುಪಿ, ದ. ಕ.

ವೇಪ್ರಿನ್ (Regd.)

ಚಿಕ್ಕ ಡಾಕ್ಟರ್, ಸ್ವದೇಶಿ ವಸ್ತು.

ಇದರ ಲೇಪನದಿಂದ ಕಜ್ಜಿ, ಘಾಯ, ವ್ರಣ, ಇಸಬು, ನಾರು ಹುಣ್ಣು, ಕರಪಾಣಿ, ಮೂಲವ್ಯಾಧಿ, ಮೆಟ್ಟಿನ ಘಾಯ, ಮುದ್ದಣ (Pimples), ಸುಟ್ಟ ಘಾಯ, ಕತ್ತಿಘಾಯ, ತೊಡವಾಳ, ಗಡಕರ್ಣ ಮಾಯವಾಗುವುವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಇದಲ್ಲದೆ ಇಂದ್ರಜಾಲ ದೋಪಾಡಿಯಲ್ಲಿ ಬೇಳೆನ ವಿಷವನ್ನು ಬಹಿರ್ಗತ ಪಡಿಸುವುದು. ನಿಮ್ಮಲ್ಲಿ ಒಂದು ಬಾಟ್ಲಿ ಇದ್ದಲ್ಲಿ ಒಬ್ಬ ವೈದ್ಯರೇ ಇದ್ದಂತಾಗುವುದು. ಕ್ರಯ ಬಹು ಸುಲಭ.

ಔನ್ಸ್ ಬಾಟ್ಲು 1ಕ್ಕೆ 0—9—0; ½ ಔನ್ಸ್‌ಗೆ 0—5—0

ಎಲ್ಲಾ ಅಂಗಡಿಗಳಲ್ಲೂ ದೊರೆಯುವುದು

ಏಜಂಟರು:—**Basel Mission Press, Mangalore.**

ಉಡುಪಿ ಮಿಶನ್ ಷಾಪ್, ಸಂತೆಕಟ್ಟೆ, ಉಡುಪಿ.
ಭಕ್ತಾ & ಬ್ರದರ್ಸ್, ಕಾಸರಗೋಡು.
ಎ. ಎ. ಶೆಣೈ, ಕಾರ್ಕಳ.
ಡಾ। ಶ್ರೀನಿವಾಸ ಪೈ, ಪುತ್ತೂರು.

ಯೋಗ್ಯ ದರದಲ್ಲಿ ಉತ್ತಮ

ದೇವಪೂಜಾ ಸಾಮಗ್ರಿ

ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಫುಕಟಾ ಕಳುಹಿಸಿ ಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧ ವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ನಿರಾಕೆಗಳಿಗೆ ತುಂಬಾ ಅನುಕೂಲ.

ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ

ಕಲ್ಮಂಜೆ ವ್ಯಾಸಾಚಾರ್ಯ,
ಭ್ಯಾಂಡೆ ವ್ಯಾಪಾರಿ, ಉಡುಪಿ, ದ. ಕ.

Kalmanje Vyasacharya, Brass-ware Merchant, UDIPI, S. K.

1321

ಮುಶ್ತರಿಕ್!

ಕೆಮ್ಮು ಮತ್ತು ಉಬ್ಬಸದ ಅತಿ ಸುಲಭ ನಿವಾರಣೆಯ ಬಗ್ಗೆ ಮುಶ್ತರಿಕನ್ನು ಅಗತ್ಯವಾಗಿ ಉಪಯೋಗಿಸಿರಿ.

ಮಂಗಳೂರಲ್ಲಿ ದೊರೆಯುವ ಸ್ಥಳಗಳು

೧. ಬಾಸೆಲ್ ಮಿಶನ್ ಶಾಪ್, ೨. ಪುತ್ತು ವೈಕುಂಟ ಸೇಟ್, ೩. ಯು. ಆರ್. ಶೆಣೈ ಎಂಡ್ ಸನ್ಸ್, ೪. ಕೆ. ಗಣಪ ಶೆಟ್ಟಿ, ಜನರಲ್ ಮರ್ಚಂಟ್, ಬಿಜೈ, ೫. ಸೆಂಟ್ರಲ್ ಸ್ಟೋರ್ಸ್.

ಸೀಸೆ 1ಕ್ಕೆ ಬೆಲೆ ಆರು ಆಣೆ ಮಾತ್ರ.

ಪ್ರೊಪ್ರೈಟರ್ಸ್— ಎ. ಯಸ್. ಗುರುಕಂಬಲ್ ಎಂಡ್ ಸನ್ಸ್,
ಮುಶ್ತರಿಕ್ ಫಾರ್ಮೆಸಿ, ಕಿನ್ನಿಕಂಬಳ ಪೋಸ್ಟ್, ದ. ಕ.

ವೆಂಕಟಗಿರಿ ಮಹಾತ್ಮೆ

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖಚಿತವಾಗುವಂತೆ ಸ್ಟೇಜ್ ಕಾಗದದಲ್ಲಿ ೧೪ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿದೆ.

ಚರ್ಚ ಪದ್ಯಗಳಿರುವ ೧೫ ಅಧ್ಯಾಯಗಳು ದಪ್ಪವಾದ ಕಾಗದ, ಮುದ್ದಾದ ಮುದ್ರಣ. ಬೆಲೆ ರೂಪ್ಯಾ ೧–೮–೦ ಟಪ್ಪಾಲು ಹಾಸಲು ಬೇರೆ. ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅನುನಿತ್ಯ ಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಅಷ್ಟಪತ್ರದ 168 ಪುಟಗಳು. ಕತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1—8—0. ಟಪ್ಪಾಲ್ಲು ಹಾಸಲು ಬೇರೆ.

ಕೆನಿ ಎಂಡ್ ಸನ್ಸ್, ಮಂಗಳೂರು, ದ. ಕ.

ಎ. ವರದುರಾಜು ಚೆಟ್ಟಿಯಾರ್,

ಜವುಳಿ ಅಂಗಡಿ, ಮಾರ್ಕೆಟು ರಸ್ತೆ, ಮಂಗಳೂರು.

ಇವರಲ್ಲಿ ಅನೇಕ ಸ್ಥಳಗಳು
ಯಾವಾಗಲೂ ಬೆಲೆ ಬಹು
ರವಿಂ ಮತ್ತು ಚಿಲ್ಲರೆ ದೊರೆಯುವ

ಶ್ರೀ ಧನಲಕ್ಷ್ಮಿ ಸ್ಟೋರ್ಸ್

(ಪ್ರೊ:— ಎ. ಶಿವಪ್ಪ ಬಂಗೇರ)

ಮಾರ್ಕೆಟ್ ರೋಡು, ಮಂಗಳೂರು.

ಇಲ್ಲಿ ಒಳ್ಳೆ ಉತ್ತಮ ನಮ್ಮತನ
ಒಮ್ಮೆ ಬಂದು ಪರೀಕ್ಷಿಸಿ

ನೋಟೀಸು

ತಾ. 2–3–
ನಾಡಿಯಲ್ಲಿರುವ ಸ
ಸನ್ನು ಬೋಳಾರ ಶ್ರೀ
ಡಿನ ಮಾಳಿಗೆಗೆ ಜಯ್ಯ
ಮಹಾಜನರು ಬೋಳಾರದ
ಹೊಸ ಬ್ರಾಂಚು ಆಫೀಸಿನ
ವಾಟುಗಳನ್ನು ನಡೆಸಿ ಪ್ರೀ
ಬೇಕಾಗಿ ಅಪೇಕ್ಷಿಸುತ್ತೇವೆ.

ದಿ ಅತ್ತೂರ್
ಬೇಂಕ್ ಲಿಮಿಟೆಡ್
ಮಂಗಳೂರು.

THE BANK OF MANGALORE LTD., MANGALORE.

ANNOUNCEMENT

On & from 1st of February 1942

fixed deposits are accepted at the followir attractive rates:–

For one year	4%
For two years or over	4½%

Interest Payable Quarterly

ಕೇಸ್ಟ್ರೋಫೀನ್

ಹರಳೆಣ್ಣೆ ಚಾಕ್‌ಲೇಟ್‌ಗಳು.

ಮಕ್ಕಳಿಗೂ ಹಾಗೂ ಜವ್ವನಿಗರಿಗೂ ಏಕಪ್ರಕಾರವಾಗಿ ಪೂರ್ಣ ನಿರುಪದ್ರವಿ, ಸಿಹಿ, ಆನಂದದಾಯಕ, ಪ್ರಯೋಜನಕಾರಿಯಾದ ಉತ್ತಮ ಚೇತನದಾಯಕ ಬೇಧಿ ಔಷಧಿ.

ಉದರಶೂಲೆಗೊಳಿಸದು ಮತ್ತು ಚಟಹಿಡಿಸದು. ಸೀಸೆಗಳಲ್ಲಿ 25, 50 ಮತ್ತು 100 ಚಾಕ್‌ಲೇಟುಗಳು, ಹಾಗೂ 2 ಬಿಲ್ಲೆಗಳ ಪ್ಯಾಕೇಟುಗಳು.

ಪ್ರತಿ ಒಂದಕ್ಕೆ ಒಂದಾಣೆ.

ಎಲ್ಲಾ ಔಷಧಿ ವ್ಯಾಪಾರಿಗೆಳಲ್ಲೂ, ಸ್ಟೋರ್‌ಗಳಲ್ಲೂ ಸಿಗುತ್ತದೆ.

ಕೇಸ್ಟ್ರೋಫೀನ್ ಮೆನ್ಯುಫೇಕ್ಚರಿಂಗ್ ಕಂಪೆನಿ,
ಪಿ. ಒ. ಬಾಕ್ಸ್ ನಂಬ್ರ 88, ಕ ರಾ ಚಿ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ ಭುಜ ಹಲ್ಲು ನೆವ್ವನೆಗಳಿಗೂ, ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಪೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

(REGD.)

ಅಮೃತಾಂಜನ

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ; ತುರಿಕಜ್ಜಿ, ಹುಳುಕಡ್ಡಿ, ಪಿತ್ಥಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ,
ಲಿಮಿಟೆಡ್

ಬೊಂಬಾಯಿ ——— ಮದ್ರಾಸ್ ——— ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE PIE-MONEY BANK, LTD.,

Maidan Road, Mangalore.

all kinds of Banking Business.

Current account at 2½% per annum.

Savings Bank Deposits at 4½% per annum.

FIXED DEPOSITS.

years 5%. 1 year 4½%. For 6 months 4%. 3 months 3½%.

action Chit Funds ranging from Rs. 100—5000 run regularly on systematic lines.

Unique Banking facilities to Businessmen and interested Public.

Apply for particulars:— *K. R. Guru, Managing Director.*

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗ ಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗ ಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯತಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು.

ಅರ್ಧ ತೊಲೆ ಸೀಸೆ 1ಕ್ಕೆ ರೂ. 5—0—0

ಆತಂಕನಿಗ್ರಹ ಫಾರ್ಮೆಸಿ, ಚಿಕ್ಕಸೇಟೆ ಚೌಕ, ಬೆಂಗಳೂರು ಸಿಟಿ.

ಏಜಂಟ್ಸ್:—ಪಲ್ಮ ಎಂಡ್ ಸನ್ಸ್, ಮಂಗಳೂರು.

WAR OR NO WAR

Life & Family Must Carry on in Peace & Comfort.

Take a Policy now in the

"Bombay Life"

AND THUS MAKE

PROVISION FOR YOUR OLD AGE AND FAMILY.

To Insure or to Represent, take advantage of over 32 years' experience in Life Insurance by consulting:

KOCHIKAR BROTHERS, LTD.,

CHIEF AGENTS FOR SOUTH INDIA—INCLUDING INDIAN STATES,

Bombay Life Assurance Co., Ltd.

OFFICES AT:—

Udipi, Mangalore, Calicut, Trivandrum, Madras, Bangalore City, & Bomb. 4.

Edited and Published by B. Vittal Rau at the Kanteerava Office, Maidan North Road, Mangalore
Printed by M. Baburaya Prabhu, B. A., at the Mangalore Press, Car Street, Mangalore.